# ಹಂಪಿ ಟೈಮ್ಸ್

HAMPI TIMES

ಕನ್ನಡ ದಿನಪತ್ರಿಕೆ
KANNADA DAILY

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA



ಇಂದು ಹಾಗೂ ಹಿಂದಿನ ಹಂಪಿ ಟೈಮ್ಸ್ ಕಲರ್‌ಫುಲ್ ಇ-ದಿನಪತ್ರಿಕೆ ಓದಲು QR ಕೋಡ್ ಸ್ಕ್ಯಾನ್ ಮಾಡಿ ಓದಿರಿ

No.1 Leading in Local News Paper

75,000

HAMPI TIMES E-PAPER READERS

94486 33038

NEWS PAPER ADD - THE BEST ADVERTISING PLATFORM TO BOOST YOUR BUSINESS

E-mail: hampitimes@gmail.com | # Valmiki Circle hospet-583201





ಸಂಪುಟ:02 • ಸಂಚಿಕೆ:19 • ನೋಂದಣಿ ಸಂ.:KARKAN27911 • ವಿಜಯನಗರ • 12.07.2024 • ಶುಕ್ರವಾರ • ಪುಟ:04 • ಬೆಲೆ:2

Volume:02 • Issue:19 • Reg.No:KARKAN27911 • VIJAYANAGARA • 12.07.2024 • Friday • Page:04 • Rs:2


## ತುಂಗಭದ್ರಾ ನೀರಿನ ಮಟ್ಟ



ಗುರುವಾರ : 11–07–2024

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1604.12 ಅಡಿ |
| ಒಳ ಹರಿವು | 25349 ಕ್ಯುಸೆಕ್ |
| ಹೊರ ಹರಿವು | 205 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 27.330 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| ಕಳೆದ ವರ್ಷ ಇದೇ ದಿನ | |
| ಇಂದಿನ ಮಟ್ಟ | 1581.82 ಅಡಿ |
| ಒಳ ಹರಿವು | 17761 ಕ್ಯುಸೆಕ್ |
| ಹೊರ ಹರಿವು | 265 ಕ್ಯುಸೆಕ್ |
| ಸಾಮರ್ಥ್ಯ | 5.419 ಟಿಎಂಸಿ |

## ನಿತ್ಯ ಪಂಚಾಂಗ

ಮಾಸ: ಆಷಾಡ । ಸಂವತ್ಸರ: ಕ್ರೋಧಿ

12–07–2024 – ಶುಕ್ರವಾರ

| | |
|---|---|
| ತಿಥಿ | : ಷಷ್ಠಿ |
| ಪಕ್ಷ | : ಶುಕ್ಲ |
| ನಕ್ಷತ್ರ | : ಉತ್ತರ ಫಾಲ್ಗುಣಿ |
| ಯೋಗ | : ಪರಿಘ |
| ಕರಣ | : ತೈತುಲ |
| ಸೂರ್ಯೋದಯ | : 05:50:17 |
| ಸೂರ್ಯಾಸ್ತ | : 19:14:52 |
| ರಾಹು | : 10:52–12:33 |
| ಯಮಘಂಡ | : 15:44–17:34 |
| ಗುಳಿಕ | : 07:31–09:11 |

# ಅಧಿಕಾರಿಗಳು ಸೌಜನ್ಯದಿಂದ ವರ್ತಿಸಿ ಹಕ್ಕು ಉಲ್ಲಂಘನೆಯಾದ್ರೆ ದೂರು ಕೊಡಿ

## ನಿರ್ಲಕ್ಷ್ಯವಹಿಸಿದ್ರೆ ಸೂಕ್ತ ಕ್ರಮಕ್ಕೆ ಶಿಫಾರಸ್ಸು ನಿಶ್ಚಿತ । ಮಾನವ ಹಕ್ಕುಗಳ ಮೌಲ್ಯ ಕಾಪಾಡಬೇಕು

## ರಾಜ್ಯ ಮಾನವ ಹಕ್ಕುಗಳ ಆಯೋಗದ ಸಭೆಯಲ್ಲಿ ಆಯೋಗದ ಅಧ್ಯಕ್ಷ ಡಾ.ಟಿ.ಶ್ಯಾಮ್ ಭಟ್ ಸೂಚನೆ

**ಹಂಪಿ ಟೈಮ್ಸ್ ಹೊಸಪೇಟೆ**

ಸಾರ್ವಜನಿಕ ಸೇವೆ ಒದಗಿಸುವಲ್ಲಿ ಲೋಪ, ವಿಳಂಬವಾಗದಂತೆ ಅಧಿಕಾರಿಗಳು ಮುತುವರ್ಜಿವಹಿಸಿ ಕಾರ್ಯನಿರ್ವಹಿಸಬೇಕು. ಬೇರೆ ಬೇರೆ ಅಹವಾಲುಗಳೊಂದಿಗೆ ಕಚೇರಿಗೆ ಆಗಮಿಸುವ ಸಾರ್ವಜನಿಕರೊಂದಿಗೆ ಅಧಿಕಾರಿಗಳು ಸೌಜನ್ಯದಿಂದ ವರ್ತಿಸಬೇಕು ಎಂದು ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗದ ಅಧ್ಯಕ್ಷರಾದ ಡಾ.ಟಿ.ಶ್ಯಾಮ್ ಭಟ್ ಹೇಳಿದರು.

ಜಿಲ್ಲಾಡಳಿತ ಭವನದಲ್ಲಿರುವ ಗುರುವಾರ ಜಿಲ್ಲಾಮಟ್ಟದ ಅಧಿಕಾರಿಗಳೊಂದಿಗೆ ಸಭೆ ನಡೆಸಿ ಮಾತನಾಡಿದರು. ಮಾನವ ಹಕ್ಕುಗಳ ಉಲ್ಲಂಘನೆಯಾಗಿವೆ ಎನ್ನುವ ಅಂಶಗಳಿಗೆ ಸಂಬಂಧಿಸಿ ಆಯೋಗಕ್ಕೆ ಸಲ್ಲಿಕೆಯಾಗುವ ದೂರುಗಳ ಬಗ್ಗೆ ಆಯೋಗವು ವರದಿ ಬಯಸಿದಾಗ ಅಧಿಕಾರಿಗಳು ವಿಳಂಬ ಮಾಡದೇ ಸೂಕ್ತವಾದ ವರದಿಯನ್ನು ಸಲ್ಲಿಸಬೇಕು. ನಿರ್ಲಕ್ಷ್ಯ ವಹಿಸಿದಲ್ಲಿ ಸಂಬಂಧಿಸಿದ ಅಧಿಕಾರಿಗಳ ನಿರ್ಲಕ್ಷ್ಯದ ಬಗ್ಗೆ ಸೂಕ್ತ ಕ್ರಮಕ್ಕಾಗಿ ಶಿಫಾರಸ್ಸು ಮಾಡಲಾಗುವುದು ಎಂದು ತಿಳಿಸಿದರು.

ಆಯೋಗದ ಸದಸ್ಯರಾದ ಎಸ್.ಕೆ.ವಂಟಿಗೋಡಿ ಅವರು ಮಾತನಾಡಿ, ಮಾನವ ಹಕ್ಕುಗಳ ಉಲ್ಲಂಘನೆಯಾಗದಂತೆ ಸಂರಕ್ಷಣೆ ಮಾಡುವ ಜವಾಬ್ದಾರಿಯು ಸರ್ಕಾರದ ಮೇಲಿದೆ. ಯಾವುದೇ ದೂರುಗಳು



ದಾಖಲಾಗದ ಹಾಗೆ ಅಚ್ಚುಕಟ್ಟಾಗಿ ಕಾರ್ಯನಿರ್ವಹಿಸಿ ಮಾನವ ಹಕ್ಕುಗಳ ಮೌಲ್ಯವನ್ನು ಕಾಪಾಡಬೇಕು ಎಂದು ಅಧಿಕಾರಿಗಳಿಗೆ ಸಲಹೆ ಮಾಡಿದರು.

ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ ಮಾತನಾಡಿ, ಕಾಲ ಕಾಲಕ್ಕೆ ಅಧಿಕಾರಿಗಳೊಂದಿಗೆ ನಡೆಸುವ ಸಭೆಯಲ್ಲಿ, ಮಾನವ ಹಕ್ಕುಗಳಿಗೆ ಧಕ್ಕೆ ಬಾರದ ರೀತಿಯಲ್ಲಿ ಉತ್ತಮ ರೀತಿಯಲ್ಲಿ ಸೇವೆ ಒದಗಿಸಲು ಅಧಿಕಾರಿಗಳಿಗೆ ಸೂಚನೆ ನೀಡಲಾಗುತ್ತಿದೆ. ಮುಖ್ಯವಾಗಿ ಶಿಕ್ಷಣ ಇಲಾಖೆ, ಆರೋಗ್ಯ ಇಲಾಖೆ ಹಾಗೂ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಅಧಿಕಾರಿಗಳೊಂದಿಗೆ ನಿರಂತರ ಸಮನ್ವಯ ಸಾಧಿಸಿ ಅಧಿಕಾರಿಗಳು ಮತ್ತು ಸಿಬ್ಬಂದಿಗೆ ಉತ್ತಮ ಸೇವೆಗಾಗಿ ಸೂಕ್ತ ಮಾರ್ಗದರ್ಶನ ಮಾಡಲಾಗುತ್ತಿದೆ. ಕೆಲವು ಅಧಿಕಾರಿಗಳು ಮತ್ತು ಸಿಬ್ಬಂದಿಯನ್ನೊಳಗೊಂಡು ವಾಟ್ಸಪ್ ಗ್ರೂಪ್ ರಚಿಸಿ ರೋಗಿಗಳಿಗೆ ಚಿಕಿತ್ಸೆ ನೀಡುವುದು, ಮಕ್ಕಳಿಗೆ ಆಹಾರ ಧಾನ್ಯ ಪೂರೈಕೆ ಸೇರಿದಂತೆ ನಾನಾ ವಿಷಯಗಳ ಬಗ್ಗೆ



> ಮಾನವ ಹಕ್ಕು ಉಲ್ಲಂಘನೆಯಾದಲ್ಲಿ ಆ ವ್ಯಕ್ತಿಯಾಗಲಿ ಅಥವಾ ಅದನ್ನು ನೋಡಿದವರು ಯಾರೇ ಆಗಲಿ ಆಯೋಗಕ್ಕೆ ದೂರು ನೀಡಬಹುದು. ದೂರು ಆಧರಿಸಿ ತನಿಖೆ ಕೈಗೊಂಡು ಸೂಕ್ತ ಕ್ರಮಕ್ಕೆ ಸರ್ಕಾರಕ್ಕೆ ಶಿಫಾರಸ್ಸು ಮಾಡಲಾಗುವುದು.
>
> **– ಡಾ.ಟಿ.ಶ್ಯಾಮ್ ಭಟ್, ಅಧ್ಯಕ್ಷರು, ಕ.ರಾ.ಮಾ.ಹ.ಆಯೋಗ.**

ಛಾಯಾಚಿತ್ರಗಳ ಮೂಲಕ ಪರೀಕ್ಷಿಸಿ ಮೇಲ್ವಿಚಾರಣೆ ಮಾಡಲಾಗುತ್ತಿದೆ. ಕಾಲಕಾಲಕ್ಕೆ ವಸತಿ ನಿಲಯಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಲಾಗುತ್ತಿದೆ ಎಂದು ತಿಳಿಸಿದರು.

ಸಭೆಯಲ್ಲಿ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಎನ್ ಎಂ ಅಲಿ ಅಕ್ರಮ ಶಾ, ಪ್ರಾದೇಶಿಕ ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿ ಅರ್ಸಲನ್, ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗದ ಕಾರ್ಯದರ್ಶಿ ಎ.ದಿನೇಶ್ ಸಂಪತ್‌ರಾಜ್, ಅಧ್ಯಕ್ಷರ ಆಪ್ತ ಕಾರ್ಯದರ್ಶಿ ಅರುಣ್ ಪೂಜಾರ, ಎಡಿಸಿ ಅನುರಾಧ ಜಿ., ಜಿಲ್ಲಾ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಸಲೀಮ್ ಪಾಶಾ, ನಗರಸಭೆ ಪ್ರಭಾರ ಪೌರಾಯುಕ್ತ ಮನೋಹರ, ತಹಸೀಲ್ದಾರ ವಿಶ್ವಜಿತ್ ಮೇಹತಾ, ವಿವಿಧ ಇಲಾಖೆ ಅಧಿಕಾರಿಗಳು ಇದ್ದರು.

# ಉನ್ನತ ಶಿಕ್ಷಣದ ಕನಸಿಗೆ ಎಸ್ಸೆಸ್ಸೆಲ್ಸಿ ಫಲಿತಾಂಶ ದಿಕ್ಸೂಚಿ

## ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ ಹೇಳಿಕೆ । ಮಾರ್ಗದರ್ಶಿಯ ಪ್ರಯೋಜನ ಪಡೆದುಕೊಳ್ಳಿ



**ಹಂಪಿ ಟೈಮ್ಸ್ ಹೊಸಪೇಟೆ**

ಹಂಪಿ ಟೈಮ್ಸ್ ದಿನಪತ್ರಿಕೆ ಎಸ್ಸೆಸ್ಸೆಲ್ಸಿ ವಿದ್ಯಾರ್ಥಿಗಳಿಗಾಗಿ ಕಲಿಕಾಸಕ್ತಿ ವೃದ್ಧಿ ಹಾಗೂ ಹೆಚ್ಚಿನ ಅಂಕ ಗಳಿಸಲು ಅನುಕೂಲವಾಗುವ ನಿಟ್ಟಿನಲ್ಲಿ ನುರಿತ ಶಿಕ್ಷಕರಿಂದ ಸಿದ್ದಗೊಳಿಸಿ, ದಿನಕ್ಕೊಂದು ವಿಷಯದಂತೆ ಹಂಪಿ ಟೈಮ್ಸ್ ಮಾರ್ಗದರ್ಶಿಯನ್ನು ಪ್ರಕಟ ಮಾಡುತ್ತಿರುವುದು ಸ್ವಾಗತರ್ಹ. ಜಿಲ್ಲೆಯ ಎಸ್ಸೆಸ್ಸೆಲ್ಸಿ ವಿದ್ಯಾರ್ಥಿಗಳು ಆಯಾ ವಿಷಯ ಶಿಕ್ಷಕರ ಮಾರ್ಗದರ್ಶನ ಮೂಲಕ ಇದರ ಪ್ರಯೋಜನ ಪಡೆದು ಉನ್ನತ ಶ್ರೇಣಿಯಲ್ಲಿ ಪಾಸಾಗಲು ಈಗಿನಿಂದಲೇ ಸಿದ್ಧರಾಗಬೇಕು ಎಂದು ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ ಹೇಳಿದರು.

ನಗರದ ಜಿಲ್ಲಾಧಿಕಾರಿ ಕಾರ್ಯಾಲಯದಲ್ಲಿ ಹಂಪಿ ಟೈಮ್ಸ್ ಮಾರ್ಗದರ್ಶಿ ಪತ್ರಿಕೆ ಕುರಿತು ಗುರುವಾರ ಮಾತನಾಡಿದರು. ಜಿಲ್ಲೆಯ ಎಸ್ಸೆಸ್ಸೆಲ್ಸಿ ಮಕ್ಕಳ ಫಲಿತಾಂಶ ಪ್ರಗತಿಗಾಗಿ ಶೈಕ್ಷಣಿಕ ವರ್ಷದ ಆರಂಭದಿಂದಲೇ ಮಾರ್ಗದರ್ಶಿ ಆರಂಭಿಸಿರುವುದು ಮಕ್ಕಳಲ್ಲಿ ಕಲಿಕಾಸಕ್ತಿಯನ್ನು ಮತ್ತಷ್ಟು ಹೆಚ್ಚಿಸಲಿದೆ. ಪ್ರತಿ ವಿದ್ಯಾರ್ಥಿ ನಿತ್ಯ ನೋಟ್ಸ್ ಬರೆದಿಟ್ಟುಕೊಂಡು, ನಿರಂತರ ಅಭ್ಯಾಸದಲ್ಲಿ ತೊಡಗಬೇಕು. ಉನ್ನತ ಶಿಕ್ಷಣದ ಕನಸಿಗೆ ಎಸ್ಸೆಸ್ಸೆಲ್ಸಿ ಫಲಿತಾಂಶ ದಿಕ್ಸೂಚಿಯಾಗಿದೆ. ವಿದ್ಯಾರ್ಥಿಗಳು ನಿರ್ಲಕ್ಷ್ಯವಹಿಸಬಾರದು. ಪೋಷಕರು ಮಕ್ಕಳನ್ನು ಅಭ್ಯಾಸದಲ್ಲಿ ತೊಡಗುವಂತೆ ನೋಡಿಕೊಳ್ಳಬೇಕು. ಮುಖ್ಯಗುರುಗಳು ಹಾಗೂ ಶಿಕ್ಷಕರು ಮಕ್ಕಳನ್ನು ಈಗಿನಿಂದಲೇ ಪರೀಕ್ಷೆಗೆ ಸಿದ್ಧಗೊಳಿಸಬೇಕು ಎಂದರು.

ವಿಜಯನಗರ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಜಿಲ್ಲಾಧ್ಯಕ್ಷ ಪಿ.ಸತ್ಯನಾರಾಯಣ ಮಾತನಾಡಿ, ನಿತ್ಯ ನಿರಂತರವಾಗಿ ಸ್ಥಳೀಯ ಪತ್ರಿಕೆಗೆ ಜನರಿಗೆ ಬೇಕಾದ ಮಾಹಿತಿಯ ಹೂರಣವನ್ನು ಅಚ್ಚುಕಟ್ಟಾಗಿ ಮುದ್ರಣಗೊಳಿಸಿ ಓದುಗರ ಕೈಗಿಡುವುದರ ಹಿಂದೆ ಅಪಾರ ಶ್ರಮವಿದೆ. ಅದರಲ್ಲೂ ಸ್ಥಳೀಯ ಪತ್ರಿಕೆ ಈ ದಿನಗಳಲ್ಲಿ ನಡೆಸುವುದು ಸವಾಲಿನ ಕೆಲಸ. ಇಂತಹ ಸಂದರ್ಭದಲ್ಲೂ ಮಕ್ಕಳ ಶೈಕ್ಷಣಿಕ ಪ್ರಗತಿಗಾಗಿ ಹಂಬಲಿಸಿ, ಶ್ರಮಿಸುತ್ತಿರುವ ಹಂಪಿ ಟೈಮ್ಸ್ ಪತ್ರಿಕೆ ಬಳಗದ ಕಾರ್ಯ ಶ್ಲಾಘನೀಯ. ಓದುಗರು ಪತ್ರಿಕೆಯನ್ನು ಕೊಂಡು ಓದಿ, ಪ್ರೋತ್ಸಾಹಿಸಿದಾಗ ಮಾತ್ರ ಪತ್ರಿಕೆಗಳು ಮತ್ತಷ್ಟು ಸಮಾಜಮುಖಿ ಕಾರ್ಯಗಳಲ್ಲಿ ತೊಡಗಿಸಿಕೊಳ್ಳಲು ಮುಂದಾಗುತ್ತವೆ. ಕಾರಣಾಂತರಗಳಿಂದ ಎಸ್ಸೆಸ್ಸೆಲ್ಸಿ ಪರೀಕ್ಷೆ ಬರೆಯದವರು ಹಂಪಿ ಟೈಮ್ಸ್ ಮಾರ್ಗದರ್ಶಿಯನ್ನು ಅಭ್ಯಾಸ ಮಾಡಿ ಪರೀಕ್ಷೆ ಕಟ್ಟಿಕೊಂಡು ಪಾಸಾಗುವ ಆಸಕ್ತರಿಗೂ ಅನುಕೂಲಕರವಾಗಿದೆ ಎಂದರು.

ಇದೇ ಸಂದರ್ಭದಲ್ಲಿ ಮಾನವ ಹಕ್ಕುಗಳ ಆಯೋಗದ ಹಂಗಾಮಿ ಅಧ್ಯಕ್ಷ ಡಾ.ಟಿ.ಶ್ಯಾಮ್ ಭಟ್ ಮತ್ತು ತಂಡ ಹಂಪಿ ಟೈಮ್ಸ್ ಮಾರ್ಗದರ್ಶಿ ನೋಡಿ ಮೆಚ್ಚುಗೆ ವ್ಯಕ್ತಪಡಿಸಿದರು.





# SSLC ಈ ಬಾರಿ ಫಲಿತಾಂಶ ನಮ್ಮದೆ ಹೈ ಸ್ಕೋರ್‌ಗೆ ಈಗಿಂದಲೇ ಅಭ್ಯಾಸ ಮಾಡಿ

Hampi Times Margadarshi

SCAN & READ E-PAPER

SSLC SCIENCE Hampi Times Margadarshi 2024-25

### ಅಧ್ಯಾಯ 1 : ರಾಸಾಯನಿಕ ಕ್ರಿಯೆಗಳು ಮತ್ತು ಸಮೀಕರಣಗಳು

* ಎರಡು ಅಥವಾ ಹೆಚ್ಚು ಪ್ರತಿವರ್ತಕಗಳು ಸೇರಿ ಒಂದೇ ಉತ್ಪನ್ನ ಉಂಟುಮಾಡುವ ಕ್ರಿಯೆಗಳನ್ನು **ಸಂಯೋಗ ಕ್ರಿಯೆ** ಎನ್ನುವರು.

**ಉದಾ–** 1. ಕ್ಯಾಲ್ಸಿಯಂ ಆಕ್ಸೈಡ್ ನೀರಿನೊಂದಿಗೆ ವರ್ತಿಸಿ ಅರಳಿದ ಸುಣ್ಣ (ಕ್ಯಾಲ್ಸಿಯಂ ಹೈಡ್ರಾಕ್ಸೈ)ವನ್ನು ಉತ್ಪತ್ತಿ ಮಾಡುತ್ತದೆ.

$CaO + H_2O \rightarrow Ca(OH)_2$ + ಉಷ್ಣ

2. ನೈಸರ್ಗಿಕ ಅನಿಲದ ದಹನ

$CH_4 + 2O_2 \rightarrow CO_2 + 2H_2O$

* ಉತ್ಪನ್ನಗಳೊಂದಿಗೆ ಉಷ್ಣ / ಶಕ್ತಿ ಬಿಡುಗಡೆಯಾಗುವ ಕ್ರಿಯೆಗಳನ್ನು **ಬಹಿರುಷ್ಣಕ ಕ್ರಿಯೆಗಳು** ಎನ್ನುವರು.

**ಉದಾ–**

1.ದಹನಕ್ರಿಯೆ, ಉಸಿರಾಟ ಕ್ರಿಯೆ, ವಿಘಟನ ಕ್ರಿಯೆ.

2. ನೀರಿನೊಂದಿಗೆ ಸೋಡಿಯಂನ ವರ್ತನೆ

$2Na + 2H_2O \rightarrow 2NaOH + H_2$ + ಉಷ್ಣ

3. ನೀರಿನೊಂದಿಗೆ ಕ್ಯಾಲ್ಸಿಯಂ ಆಕ್ಸೈಡ್ (ಸುಟ್ಟ ಸುಣ್ಣ) ವರ್ತನೆ

$CaO + H_2O \rightarrow Ca(OH)_2$ + ಉಷ್ಣ

4. ಅಮೋನಿಯಾ ತಯಾರಿಕೆ

$3H_2 + N_2 \rightarrow 2NH_3$ + ಉಷ್ಣ

* ಉತ್ಪನ್ನಗಳೊಂದಿಗೆ ಉಷ್ಣ / ಶಕ್ತಿ ಹೀರಿಕೆಯಾಗುವ ಕ್ರಿಯೆಗಳನ್ನು **ಅಂತರುಷ್ಣಕ ಕ್ರಿಯೆಗಳು** ಎನ್ನುವರು.

**ಉದಾ–** $CaCO_3 \longrightarrow CaO + CO_2$

* ಒಂದು ಪ್ರತಿವರ್ತಕವು ವಿಭಜನೆಗೊಂಡು ಎರಡು ಅಥವಾ ಹೆಚ್ಚು ಉತ್ಪನ್ನಗಳು ಉಂಟಾಗುವ ಕ್ರಿಯೆಯನ್ನು **ವಿಭಜನ ಕ್ರಿಯೆ** ಎನ್ನುವರು.

ಉದಾ–1. $2FeSO_4 \rightarrow Fe_2O_3 + SO_2 + SO_3$

2. $2Pb(NO_3)_2 \rightarrow 2PbO + 4NO_2 + O_2$
(ಕಂದು ಬಣ್ಣದ ಧೂಮ)

**ವಿಭಜನ ಕ್ರಿಯೆಯ ವಿಧಗಳು :**

1. ವಿಭಜನ ಕ್ರಿಯೆಯು ಉಷ್ಣದ ಸಹಾಯದಿಂದ ನಡೆದರೆ ಅದನ್ನು **ಉಷ್ಣ ವಿಭಜನ ಕ್ರಿಯೆ** ಎನ್ನುವರು.

**ಉದಾ–** $CaCO_3 \xrightarrow{\text{ಉಷ್ಣ}} CaO + CO_2$

2. ವಿಭಜನ ಕ್ರಿಯೆಯು ಸೂರ್ಯನ ಬೆಳಕಿನಲ್ಲಿ ನಡೆದರೆ ಅದನ್ನು **ದ್ಯುತಿ ವಿಭಜನ ಕ್ರಿಯೆ** ಎನ್ನುವರು.

**ಉದಾ–** $2AgBr \xrightarrow{\text{ಸೂರ್ಯನ ಬೆಳಕು}} 2Ag + Br_2$


(ಈ ಕ್ರಿಯೆಯನ್ನು ಕಪ್ಪು ಬಿಳುಪು ಛಾಯಾಗ್ರಹಣದಲ್ಲಿ ಬಳಸುತ್ತಾರೆ)

3. ವಿಭಜನ ಕ್ರಿಯೆಯು ವಿದ್ಯುತ್ ಶಕ್ತಿಯಿಂದ ನಡೆದರೆ ಅದನ್ನು **ವಿದ್ಯುತ್ ವಿಭಜನ ಕ್ರಿಯೆ** ಎನ್ನುವರು.

**ಉದಾ–** $2H_2O \xrightarrow{\text{ವಿದ್ಯುತ್ ಶಕ್ತಿ}} 2H_2 + O_2$

**ನೀರಿನ ವಿದ್ಯುತ್ ವಿಭಜನೆ ಕ್ರಿಯೆ :**

# ಚಿತ್ರದಲ್ಲಿ ತೋರಿಸಿದಂತೆ, ಗ್ರಾಫೈಟ್ ದಂಡಗಳನ್ನು 6Volt ಬ್ಯಾಟರಿಗೆ ಸಂಪರ್ಕಿಸಿದಾಗ ನೀರಿನ ವಿಭಜನ ಕ್ರಿಯೆ ನಡೆದು, ಆ್ಯನೋಡ್‌ನಲ್ಲಿ ಆಕ್ಸಿಜನ್ ಮತ್ತು




ಕ್ಯಾಥೋಡ್‌ನಲ್ಲಿ ಹೈಡ್ರೋಜನ್ 2:1 ಅನುಪಾತದಲ್ಲಿ ಸಂಗ್ರಹವಾಗುತ್ತವೆ.

# ಶುದ್ಧ ನೀರು ವಿದ್ಯುತ್ ಅವಾಹಕವಾಗಿದ್ದು , ವಾಹಕತೆಯನ್ನು ಉಂಟುಮಾಡಲು ಕ್ರಿಯೆ ಜರಗುವ ಮೊದಲು ನೀರಿಗೆ ಸಲ್ಫೂರಿಕ್ ಆಮ್ಲದ ಕೆಲವು ಹನಿಗಳನ್ನು ಸೇರಿಸುವುದು ಅವಶ್ಯಕ.

* ಹೆಚ್ಚು ಕ್ರಿಯಾಪಟು ಧಾತುವು ಸಂಯುಕ್ತದಲ್ಲಿನ ಕಡಿಮೆ ಕ್ರಿಯಾಪಟು ಧಾತುವನ್ನು ಪಲ್ಲಟಗೊಳಿಸುವ ಕ್ರಿಯೆಗೆ **ಸ್ಥಾನಪಲ್ಲಟ ಕ್ರಿಯೆ** ಎನ್ನುವರು.

**ಉದಾ–**

$Fe(s) + CuSO_4(aq) \rightarrow FeSO_4(aq) + Cu(s)$
(ತಾಮ್ರದ ಸಲ್ಫೇಟ್) (ಕಬ್ಬಿಣದ ಸಲ್ಫೇಟ್)


( ಮುಂದುವರೆಯುವುದು )


ಮಾರ್ಗದರ್ಶಿ ಶಿಕ್ಷಕರು: ಶಿವತನಯ ಎಸ್.ಸಿ, ವಿಜ್ಞಾನ ಶಿಕ್ಷಕರು, ಎಸ್.ಜಿ.ಬಿ.ಪ್ರೌಢಶಾಲೆ, ಬೆಣಕಲ್ಲು. ಹ.ಬೊ.ಹಳ್ಳಿ ತಾ. ವಿಜಯನಗರ ಜಿ


ಸಾಯಿಮಣಿ ಪ್ರಕಾಶನ, ಹೊಸಪೇಟೆ

ಹಂಪಿ ಟೈಮ್ಸ್ HAMPI TIMES

## ವಿಜ್ಞಾನ

# ಎಣ್ಣೆ ಏಕೆ ನೀರಿನ ಮೇಲೆ ತೇಲುತ್ತದೆ?

■ ಆರ್.ಬಿ.ಗುರುಬಸವರಾಜ

ಮಳೆಗಾಲದಲ್ಲಿ ತೈಲವು ನೀರಿನ ಮೇಲೆ ಏಕೆ ವರ್ಣರಂಜಿತ ಚಿತ್ರಗಳನ್ನು ಮೂಡಿಸುತ್ತದೆ ಎಂದು ತಿಳಿದುಕೊಂಡ ಪ್ರಶಾಂತನಿಗೆ ಮತ್ತೊಂದು ಪ್ರಶ್ನೆ ಮೂಡಿತು. ಈ ಬಾರಿ ಅಜ್ಜಿಯ ಬಳಿ ಈ ಪ್ರಶ್ನೆ ಕೇಳಿದ. "ಅಜ್ಜಿ, ಎಣ್ಣೆ ಏಕೆ ನೀರಿನ ಮೇಲೆ ತೇಲುತ್ತದೆ?" ಎಂದ. ಅದಕ್ಕೆ ಅಜ್ಜಿ ತನಗೆ ತಿಳಿದ ಉತ್ತರ ಹೇಳತೊಡಗಿದಳು.

ಎಣ್ಣೆಯು ನೀರಿನ ಮೇಲೆ ತೇಲುತ್ತದೆ ಎಂದು ತಿಳಿಯುವ ಮುನ್ನ ಎಣ್ಣೆ ಮತ್ತು ನೀರಿನ ಸಾಂದ್ರತೆ ಬಗ್ಗೆ ತಿಳಿಯಬೇಕು. ಸಾಂದ್ರತೆಯು ಒಂದು ವಸ್ತುವಿನ ನಿರ್ದಿಷ್ಟ ಪರಿಮಾಣದಲ್ಲಿ ಎಷ್ಟು ದ್ರವ್ಯರಾಶಿಯನ್ನು ಒಳಗೊಂಡಿರುತ್ತದೆ ಎಂಬುದರ ಅಳತೆಯಾಗಿದೆ. ಒಂದು ವಸ್ತುವು ನೀರಿಗಿಂತ ಕಡಿಮೆ ಸಾಂದ್ರತೆಯನ್ನು ಹೊಂದಿದ್ದರೆ ಅದು ನೀರಿನ ಮೇಲೆ ತೇಲುತ್ತದೆ. ಎಣ್ಣೆಯ ಸಾಂದ್ರತೆ ನೀರಿನ ಸಾಂದ್ರತೆಗಿಂತ ಕಡಿಮೆ. ಎಣ್ಣೆಯು ಹೈಡ್ರೋ ಕಾರ್ಬನ್‌ಗಳಿಂದ ಮಾಡಲ್ಪಟ್ಟಿ ರುವುದರಿಂದ



ಕಡಿಮೆ ಸಾಂದ್ರತೆ ಹೊಂದಿದೆ. ಎಣ್ಣೆ ನೀರಿನ ಮೇಲೆ ಬಿದ್ದಾಗ ಅದು ನೀರಿನ ಮೇಲೆ ಪದರವನ್ನು ರೂಪಿಸುತ್ತದೆ. ಹಾಗಾಗಿ ಎಣ್ಣೆ ನೀರಿನ ಮೇಲೆ ತೇಲುತ್ತದೆ.

ಎಣ್ಣೆಯು ನೀರಿಗಿಂತ ಕಡಿಮೆ ದಟ್ಟವಾಗಿರುತ್ತದೆ. ಎಣ್ಣೆಯು ನೀರಿನ ಅಣುಗಳಿಗಿಂತ ದೊಡ್ಡದಾದ ಮತ್ತು ಹೆಚ್ಚು ಸಂಕೀರ್ಣವಾದ ರಚನೆಗಳನ್ನು ಹೊಂದಿರುವ ಅಣುಗಳಿಂದ ಮಾಡಲ್ಪಟ್ಟಿದೆ. ಈ ದೊಡ್ಡ ಮತ್ತು ಹೆಚ್ಚು ಸಂಕೀರ್ಣವಾದ ಅಣುಗಳು ನೀರಿನ ಅಣುಗಳಿಗಿಂತ ಕಡಿಮೆ ಬಂಧವನ್ನು ಹೊಂದಿರುತ್ತವೆ. ಆದ್ದರಿಂದ ಎಣ್ಣೆಯು ನೀರಿಗಿಂತ ಕಡಿಮೆ ಪರಿಮಾಣದ ದ್ರವ್ಯರಾಶಿಯನ್ನು ಹೊಂದಿರುತ್ತದೆ.

ಅಲ್ಲದೇ ಎಣ್ಣೆ ಮತ್ತು ನೀರು ವಿಭಿನ್ನ ಧ್ರುವೀಯತೆಯನ್ನು ಹೊಂದಿರುವುದರಿಂದ ಎರಡೂ ಒಟ್ಟಿಗೆ ಬೆರೆಯುವುದಿಲ್ಲ. ನೀರು ಧ್ರುವೀಯ ಅಣುವಾಗಿದೆ. ಅಂದರೆ ಅದು ಎರಡೂ ತುದಿಗಳಲ್ಲಿ ಸ್ವಲ್ಪ ವಿದ್ಯುತ್ ಆವೇಶಗಳನ್ನು ಹೊಂದಿರುತ್ತದೆ. ಹಾಗಾಗಿ ಹೈಡ್ರೋಜನ್ ಬಂಧಗಳನ್ನು ರೂಪಿಸುತ್ತವೆ. ಎಣ್ಣೆಯ ಅಣುಗಳು ನೀರಿನ ಅಣುಗಳಂತೆ ಧ್ರುವೀಯ ತುದಿಗಳನ್ನು ಹೊಂದಿರುವುದಿಲ್ಲ. ಅಂದರೆ ಅವು ನೀರಿನ ಅಣುಗಳೊಂದಿಗೆ ಹೈಡ್ರೋಜನ್ ಬಂಧಗಳನ್ನು ರೂಪಿಸಲು ಸಾಧ್ಯವಿಲ್ಲ. ಅಂದರೆ ಅದು ಯಾವುದೇ ವಿದ್ಯುತ್ ಆವೇಶಗಳನ್ನು ಹೊಂದಿಲ್ಲ. ಎಣ್ಣೆ ಮತ್ತು ನೀರಿನ ಅಣುಗಳ ನಡುವಿನ ಆಕರ್ಷಣೆಯ ಕೊರತೆಯು ಎಣ್ಣೆ ನೀರಿನ ಮೇಲೆ ತೇಲುತ್ತದೆ. ಎಲ್ಲಾ ಎಣ್ಣೆಗಳು ನೀರಿನ ಮೇಲೆ ತೇಲುವುದಿಲ್ಲ. ಕೆಲವು ವಿಧದ ಕಚ್ಚಾ ತೈಲಗಳು ನೀರಿನಲ್ಲಿ ಮುಳುಗುತ್ತವೆ. ಏಕೆಂದರೆ ಅವುಗಳು ನೀರಿಗಿಂತಹೆಚ್ಚಿನ ಸಾಂದ್ರತೆ ಹೊಂದಿರುತ್ತವೆ.

### ಮಕ್ಕಳು ಅರಸರಾಗಬೇಕೇ?

ಓದಲು ಸಮಯವಿಲ್ಲವೆಂದು ಪತ್ರಿಕೆಯನ್ನು ಕೈ ಬಿಡಬಾರದು, ಕನ್ನಡ ಪತ್ರಿಕೆಯೊಂದು ಕೈಯಲ್ಲಿಡಿದರೆ, ಹಿರಿಯರನ್ನು ಅನುಸರಿಸುವ ಮಕ್ಕಳು ಮೊಬೈಲ್ ಬಿಟ್ಟು ಅಕ್ಷರ ದಾಸರಾಗುತ್ತಾರೆ. ಅಕ್ಷರ ದಾಸರಾದರೆ ಅರಸರು ಆಗಬಲ್ಲರಲ್ಲವೇ ?

### ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

**ಬೆಳಕಿನ ಹಾದಿ:** ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

**ಸಂಪಾದಕರು:** ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ. ಇ-ಮೇಲ್:hampitimes@gmail.com
M: 94486 33038

### ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
– ಜಾಹೀರಾತು ವ್ಯವಸ್ಥಾಪಕರು.

# ಎಲ್ಲವೂ ಹಿತಮಿತ- ವ್ಯಕ್ತಿತ್ವ ಶಕ್ತಿಯುತ

ಸಮಾಜದಲ್ಲಿ ಗಣ್ಯರು-ಹಿರಿಯರು ಹೇಳುವ ಎಚ್ಚರಿಕೆ ಮಾತುಗಳೇನೆಂದರೆ: ಯಾವುದನ್ನೇ ಆಗಲಿ ಹಿತಮಿತವಾಗಿ ಬಳಸಿ ಎಂಬುದು. ಸಮಯ ಅಥವಾ ಸಂದರ್ಭಾನುಸಾರ ಆಹಾರ, ವಿಹಾರ, ಮಾತು, ಆಸೆ, ಆಮಿಷಗಳೆಲ್ಲಾ ಹಿತಮಿತವಾಗಿದ್ದರೆ ಎಷ್ಟು ಚೆಂದ. ದಿನನಿತ್ಯ ಆಹಾರದಲ್ಲಿ ಖಾರ, ಸಿಹಿ, ಹುಳಿ, ಉಪ್ಪು, ಒಗರು, ಎಣ್ಣೆ, ಬೆಣ್ಣೆ ಮುಂತಾದ ಪದಾರ್ಥಗಳನ್ನು ಅತಿಯಾಗಿ ಸೇವಿಸಿದಾಗ ಆರೋಗ್ಯದಲ್ಲಿ ಏರುಪೇರಾಗದಿರದು. ಅತೀಯಾದರೆ ಅಮೃತವೂ ವಿಷವಂತೆ. ಹಾಗೆಯೇ ಒಳಗಿನ ದೇಹ ಪ್ರಕೃತಿಯಾಗಿರಲಿ ಅಥವಾ ಹೊರಗಿನ ಪ್ರಕೃತಿಯಾಗಿರಲಿ ಜೋಪಾನವಾಗಿ ಬಳಕೆ ಮಾಡಿದರೆ ಅವು ದೀರ್ಘಕಾಲದವರೆಗೆ ಬಾಳಿಕೆ ಬರುವುದುಂಟು. ಉದಾಹರಣೆಗೆ: ಆರೋಗ್ಯ ಕಾಪಾಡಿಕೊಳ್ಳುವಲ್ಲಿ ನಿಯಮಿತವಾದ ವಾಯುವಿಹಾರ, ವ್ಯಾಯಾಮ, ಯೋಗ, ಪ್ರಾಣಯಾಮ ಇತ್ಯಾದಿ. ಹಾಗೆಯೇ ಪ್ರಕೃತಿಯಲ್ಲಿ ದೊರೆಯುವ ಗಿಡ, ಮರ, ಹಣ್ಣು, ನೀರು, ಖನಿಜಸಂಪತ್ತು ಇತ್ಯಾದಿಗಳನ್ನು ನಿಯಮಿತವಾಗಿ ಬಳಕೆ ಮಾಡಬೇಕು.

ಇತರರಿಗೆ ಸಹಾಯಮಾಡುವಾಗಲೂ ಕೆಲವೊಮ್ಮೆ ಯೋಚಿಸ ಬೇಕಾಗುತ್ತದೆ. ಯಾರು? ಏನು? ಎಂಬುದರ ಅರಿವೆಯಿಲ್ಲದೆ ಸಹಾಯ ಮಾಡಲು ಹೋಗಿ ಸಂಕಷ್ಟಕ್ಕೆ ಗುರಿಯಾಗಬೇಕಾದೀತು. ಸಹಾಯದ ನೆಪದಲ್ಲಿ ಇರುವುದೆಲ್ಲವನ್ನೂ ಕೊಡುವುದು, ಕೊಟ್ಟ ಮೇಲೆ ಮರುಗುವುದು ಸರಿಯಲ್ಲ. 'ಕೊಡದಿದ್ದಡೊಂದು ಗುಣವಿಲ್ಲದಿದ್ದಡೆ ಕೆಡಹಿ ಮೂಗ ಕೊಯ್ವದೆ ಮಾಣ್ಬನೆ' ಎಂದು ವಚನಕಾರರೂ ಪ್ರಶ್ನಿಸಿದ್ದಾರೆ. ಕರ್ಣ ಎಲ್ಲವನ್ನೂ ಕೊಟ್ಟು ಕೆಟ್ಟವನಾದರೆ, ದುರ್ಯೋದನ ಕೊಡದೇ ಕೆಟ್ಟ. ಹರಿಶ್ಚಂದ್ರ ಎಲ್ಲವನ್ನೂ ದಾನ ಮಾಡಿ, ಹೆಂಡತಿ ಮಗನನ್ನು ಮಾರಿಕೊಂಡು ಕಾಡಿಗೆ ಹೋದ. ಇದು ಸ್ವಲ್ಪ ಅತಿ ಅನ್ನಿಸುವುದಿಲ್ಲವೆ? ಸರ್ವಜ್ಞ ಹೇಳಿದಂತೆ: 'ಸಿರಿ ಬಂದ ಕಾಲಕ್ಕೆ ಕರೆದು ದಾನವ ಮಾಡು ಪರಿಣಾಮವಕ್ಕು ಪದವಕ್ಕು ಕೈಲಾಸ ನೆರೆಮನೆಯಕ್ಕು' ನಾವು ಗಳಿಸಿದ ಸಂಪತ್ತನ್ನು ಪರರಿಗೆ, ಬಡವರಿಗೆ, ನಿರ್ಗತಿಕರಿಗೆ ಯಾವ ಪ್ರತಿಫಲಾಪೇಕ್ಷೆ ಇಲ್ಲದೆ ಸ್ವಲ್ಪಭಾಗ ದಾನ ಮಾಡುವುದು ಪುಣ್ಯದ ಕಾರ್ಯ ಎಂದು ಮಹಾತ್ಮರು ಹೇಳಿದ್ದಾರೆ.



ಡಾ. ರಾಜಶೇಖರ ಜಮದಂಡಿ, ಲೇಖಕರು ಮೊ: 9448441471

Hampi Times E-paper
SCAN AND READ

'ಸಿರಿ ಎಂಬುದು ಸಂತೆಯ ಮಂದಿ ಕಂಡಯ್ಯಾ' ಶರಣರು ಹೇಳಿದಂತೆ, ಸಂತೆಯಲ್ಲಿ ಜನಸಂದಣಿ ಸಂಜೆಯವರೆಗೂ ಇದ್ದು ನಂತರ ರಾತ್ರಿಗೆ ಯಾರೂ ಇರುವುದಿಲ್ಲ. ಹಾಗೆ ಭಗವಂತ ಕೊಟ್ಟಾಗ ಸದುಪಯೋಗವಾಗುವ ರೀತಿಯಲ್ಲಿ ದಾನ ಮಾಡಲೇಬೇಕು. ನಾವು ಗಳಿಸಿದ ಸಂಪತ್ತು ದಾನ ಮಾಡಿದಿದ್ದರೆ ಅದು ನಮ್ಮ ಹಿಂದೆ ಬರುವುದಿಲ್ಲವೆಂದು, 'ಸೊಡರೆಣ್ಣೆ ತೀರಿದರೆ ಕೊಡನೆತ್ತಿ ಹೊಯ್ಯುವರೆ'? ಎಂದು ಕವಿಯೊಬ್ಬ ಪ್ರಶ್ನಿಸಿದ್ದಾನೆ. 'ಕೊಡಬೇಡ ಕೊಡದೇ ಇರಬೇಡ ಕೊಟ್ಟಿದ್ದು ಕೆಟ್ಟಿತ್ತೆನಬೇಡ ಮುಂದೆ ಕಟ್ಟಿಹುದು ಬುತ್ತಿ' ಎಂದು ಸರ್ವಜ್ಞ ತಿಳಿಸಿದ್ದಾನೆ. ಕೊಡುವಾಗಾಗುವ ಮನದಲ್ಲಿನ ತೃಪ್ತಿಯ ಭಾವನೆಗೆ ಬೆಲೆ ಕಟ್ಟಲಾಗುವುದಿಲ್ಲ. ಆದರೂ ನಾನು ದಾನ ಮಾಡಿದೆ, ನಾನೇ ಕೊಟ್ಟೆ ಎಂಬ ಅಹಂಕಾರದ ಪಿತ್ತ ನೆತ್ತಿಗೇರದಂತೆ ಎಚ್ಚರಿಕೆ ವಹಿಸಬೇಕು. ಎಷ್ಟೋ ಬಾರಿ ಎಡಗೈ ಕೊಟ್ಟಿದ್ದು ಬಲಗೈಗೆ, ಬಲಗೈ ಕೊಟ್ಟಿದ್ದು ಎಡಗೈಗೆ ಗೊತ್ತಾಗಬಾರದು ಎಂದು ಜನಪದರೆಂದಂತೆ, ಬಸವಣ್ಣನವರು ಸಹ 'ಮಾಡಿದೆನೆಂಬುದು ಮನದಲ್ಲಿ ಹೊಳೆದರೆ ಏಡಿಸಿ ಕಾಡಿತ್ತು ಶಿವನ ಡಂಗುರ, ಮಾಡಿದೆನೆನ್ನದಿರಾ ಲಿಂಗಕ್ಕೆ ಮಾಡಿದೆನೆನ್ನದಿರಾ ಜಂಗಮಕ್ಕೆ ಮಾಡಿದೆನೆಂಬುದು ಮನದಲ್ಲಿಲ್ಲದಿದ್ದಡೆ ಬೇಡಿದ್ದನೀವ' ಎಂದು ಬೋಧನೆಗೈದಿದ್ದಾರೆ. ಹಾಗಾಗಿ ಮುಂದಾಲೋಚನೆ, ಮುಂಜಾಗ್ರತೆಯಿಂದ ಸಾಧ್ಯವಾದಷ್ಟು ಇತರರಿಗೆ ಸಹಕರಿಸುವುದರ ಮೂಲಕ ಉತ್ತಮ ವ್ಯಕ್ತಿತ್ವದ ಬದುಕು ಕಟ್ಟಿಕೊಳ್ಳೋಣ... ಮಾನವೀಯ ಮೌಲ್ಯಗಳ ಕಾಪಾಡೋಣ...



# ಅಪರೂಪವಾಗುತ್ತಿರುವ ಎತ್ತಿನಬಂಡಿ

ಬಂಡಿ ಎಂದರೆ ಸಾಕು, ನೊಗ ಕಟ್ಟಿದ, ಎತ್ತಿನ ಕೊರಳಿಗೆ ಗೆಜ್ಜೆ ಕಟ್ಟಿದ ಬಂಡಿಗಳೇ ಕಣ್ಮುಂದೆ ನಿಲ್ಲುವುದು. ಚಕ್ರ ಕಂಡುಹಿಡಿದ ನಂತರ, ಬಹು ಹಿಂದಿನಿಂದಲೂ ಎತ್ತಿನ ಬಂಡಿಯೇ, ಪಟ್ಟಣ ಪ್ರದೇಶ, ಹಳ್ಳಿಗಳ ನಾಡಿಯಾಗಿ ಪ್ರಯಾಣಕ್ಕೆ, ಸರಕು ಸಾಗಾಣಿಕೆಗೆ, ಮೇವು ತರಲು, ಬೆಳೆದ ಬೆಳೆ, ತರಕಾರಿಗಳ ರವಾನೆಗೆ ಬೇಕಾದ ಬದುಕಿನ ಬಂಡಿ ಯಾಗಿತ್ತು. ಊರಿಂದ ಊರಿಗೆ ಹೋಗಲು, ಜಾತ್ರೆಗೆ ಹೋಗಲು "ಸವಾರಿ ಬಂಡಿ"ಯಾಗಿತ್ತು. ಮನೆಯವರೆಲ್ಲಾ ಸೇರಿ ತೋಟ, ಹೊಳೆ ಹತ್ತಿರ ಊಟಕ್ಕೆ ಹೋದಾಗ ಕರೆದೊಯ್ಯಲು ಎತ್ತಿನಬಂಡಿ ಜೊತೆಯಾಗುತ್ತಿತ್ತು. ಕೃಷಿ ಉತ್ಪನ್ನಗಳನ್ನು ಸಾಗಿಸಲು, ಕೃಷಿಕರ ನಿತ್ಯದ ಹೊಲ-ಮನೆ ಓಡಾಟಕ್ಕೆ ಬಹುಮುಖ್ಯವಾಗಿ ಬೇಕಾಗಿತ್ತು. ಕೃಷಿ ಉಪಕರಣಗಳಲ್ಲಿ ಬಹುಮುಖ್ಯವಾಗಿ, ಪ್ರತಿಯೊಬ್ಬರ ಮನೆಯಂಗಳ, ಹಿತ್ತಲಲ್ಲಿ ಒಂದೆರಡು ಬಂಡಿಗಳು ಇದ್ದೇ ಇರುತ್ತಿದ್ದವು. ಹಿರಿಯರು ಹಿಂದೆಲ್ಲಾ, ಒಂದು ಎತ್ತಿನಿಂದ ಬಂಡಿ ಕಟ್ಟಲು ಆಗದು ಎನ್ನುವಂತೆ, "ಒಂಟಿ ಎತ್ತು, ಎತ್ತಲ್ಲ", ಎನ್ನುವ ಒಳಾರ್ಥದ ನಾಣ್ನುಡಿ ಬಳಸುತ್ತಿದ್ದರು. ಇದರರ್ಥ, ಒಂದಕ್ಕಿಂತ ಜೊತೆಯಾಗಿದ್ದರೆ ಬಲ ಜಾಸ್ತಿ, ಯಾರು ಬೇರ್ಪಡಿಸಲಾಗದು, ಎರಡಿದ್ದರೆ ಭಾರ ಹಂಚಿಕೆಯಾಗುವುದು ಎನ್ನುವ ಸೂಕ್ಷ್ಮ ಅರ್ಥದಲ್ಲಿ, ಎರಡ್ಮೂರು ಜೋಡಿ ಎತ್ತುಗಳು ಕೊಟ್ಟಿಗೆಯಲ್ಲಿ ಇದ್ದೆ ಇರುತ್ತಿದ್ದವು. ಆದರೀಗ ಭೂಮಿಯ ಕಡಿಮೆ ಹಿಡುವಳಿಯಲ್ಲಿ ಲಕ್ಷ್ಯಾಂತರ ರೂಪಾಯಿ ಬೆಲೆಬಾಳುವ ಎತ್ತುಗಳನ್ನು ಮತ್ತೆ ಖರೀದಿಸಲು ಎಲ್ಲರಿಗೂ ಸಾಧ್ಯವಿಲ್ಲ. ಹಾಗಾಗಿ ಬದಲಾದ ಕಾಲಮಾನದಲ್ಲಿ, ಅನುಕೂಲವಾಗಿರುವ ಪರ್ಯಾಯ ವಾಹನದ ಜೊತೆ, ಮನೆಯಲ್ಲಿ ಒಂದು ಎತ್ತಿನ ಬಂಡಿ ಇದ್ದರೆ ಅದೇ, ಬಹುದೊಡ್ಡ ಬಳುವಳಿ, ಹೆಮ್ಮೆ ಅಲ್ಲವೇ!! ಆದರೆ ಕೆಲವರ ಮನೆಯಲ್ಲಿ ಬಂಡಿಗಳಿದ್ದ ಕುರುಹುಗಳು ಇಲ್ಲ.

ಈಗ ಬಂಡಿ ಓಡಾಟ ಕಡಿಮೆಯಾಗಿದೆ ಎನಿಸಿದರು, ಹಲವು ವರ್ಷಗಳ ಹಿಂದೆ, ಪ್ರತಿ ಮನೆಯಲ್ಲಿ, ಬಂಡಿ ಕಟ್ಟಿಕೊಂಡು ಹೊಲ-ಗದ್ದೆಗೆ ಹೋಗುತ್ತಿದ್ದರು.

ಮುಂಜಾನೆ- ಮುಸ್ಸಂಜೆ ಹೊತ್ತು ಹಳ್ಳಿಗಳಲ್ಲಿ, ಎತ್ತಿನ ಬಂಡಿಗಳ ಓಡಾಟ ಸಾಮಾನ್ಯ ದೃಶ್ಯವೇ ಆಗಿತ್ತು. ಈಗ ಬಂಡಿ ಇದ್ದರೂ, ಹೊಲದ ದಾರಿಯಲ್ಲಿ ಓಡಾಡಲು ಇದೇ ಸೂಕ್ತ ವಾದರೂ, ವೇಗದ ಕಾಲ ಮಾನಕ್ಕೆ ತಕ್ಕಂತೆ ಕೆಲವು ಸಲ 'ಬಂಡಿ ಕಟ್ಟುವುದಿಲ್ಲ'. ಆ ಜಾಗವನ್ನು ಟ್ರ್ಯಾಕ್ಟರ್ ಇನ್ನಿತರೇ ವಾಹನಗಳು ಆವರಿಸಿ, ವೇಗದ ಜಗತ್ತಿನಲ್ಲಿ ಕೃಷಿಯ ಅನುಕೂಲತೆಗೆ, ಅನಿವಾರ್ಯವಾಗುವುದನ್ನು ಅಲ್ಲಗಳೆಯುವಂತಿಲ್ಲ.



ಲೀಲಾವತಿ ಶಿವನಗೌಡ್ರು, ಅಂಕಸಮುದ್ರ, ಹ.ಬೊ.ಹಳ್ಳಿ

Hampi Times E-paper
SCAN AND READ

ಈಗೀಗ ಬಂಡಿ ಸವಾರಿ ಕಡಿಮೆ ಎನ್ನಬಹುದು. ಸಾಂದರ್ಭಿಕವಾಗಿ ಕೆಲವು ಜಾತ್ರೆಯ ನಿಯಮದಂತೆ, ಜಾತ್ರೆಗಳಲ್ಲಿ ಬಂಡಿ ಕಟ್ಟುವುದು ಬಿಟ್ಟರೆ, ಎತ್ತಿನ ಬಂಡಿ ಸವಾರಿ ಅಪರೂಪವಾಗುತ್ತಿವೆ. ನಮ್ಮ ಭಾಗದಲ್ಲಿ ಕೊಟ್ಟೂರು ರಥೋತ್ಸವ, ಮೈಲಾರ ಕಾರ್ಣಿಕದ ಸಮಯ, ಕುರುವತ್ತಿ, ನಂದಿಪುರದ ದೊಡ್ಡ ಬಸವೇಶ್ವರರ ತೇರಿನ ಸಮಯ, ತಂಬ್ರಹಳ್ಳಿಯ ಬಂಡೇ ರಂಗನಾಥನ ತೇರಿನ ಸಮಯ, ಎತ್ತಿನ ಬಂಡಿಗಳ ಅಲಂಕಾರದ ಸ್ಪರ್ದೆಯೇ ನಡೆಯುವುದು. ಅಲಂಕೃತಗೊಂಡು, ಸಾಲಾಗಿ ಉತ್ಸಾಹದಿಂದ ತೇರಿಗೆ ಬರುವ ಎತ್ತಿನ ಬಂಡೆಗಳನ್ನು ನೋಡುವುದೇ ಚಂದ. ಇದೇ ಅಲ್ಲವೇ ನಮ್ಮ ಊರುಗಳ ಅಂದದ ಸಂಪ್ರದಾಯ ಎನಿಸುವುದು!!

'ಎತ್ತಿನ ಬಂಡಿ ' ಕೇವಲ ವಸ್ತುಗಳ ಸಾಗಾಣಿಕೆ, ಪ್ರಯಾಣದ ದೃಷಿಯಿಂದ ಮಾತ್ರ ನೋಡುವುದಲ್ಲ. ಅದು ಹಳ್ಳಿ ಸಂಸ್ಕೃತಿ, ಕೃಷಿ ಸಂಸ್ಕೃತಿಯೇ ಆಗಿದೆ. ಕಾರಣ ಅಮವಾಸ್ಯೆ, ಹಬ್ಬ-ಹರಿದಿನಗಳು, ದೊಡ್ಡ ಹಬ್ಬಗಳಲ್ಲಿ, ಸೋಮವಾರಗಳಲ್ಲಿ ಬಸವಣ್ಣನ ವಾರವೆಂದು ಎತ್ತು-ಬಂಡಿಗೆ ಪೂಜೆ ಮಾಡಿ, ಅಂದು ಕೃಷಿ ಕೆಲಸದಿಂದ ವಿಶ್ರಾಂತಿ ನೀಡುವರು. ಎತ್ತುಗಳು ಕಲ್ಲು, ಹರಳು, ಮಣ್ಣಿನ ಹೆಂಟೆ, ಮುಳ್ಳು ತುಳಿದರೆ ಅಪಾಯವಾಗಬಾರದೆಂಬ ದೃಷ್ಟಿಯಿಂದ, ವರ್ಷಕ್ಕೊಮ್ಮೆ ಸೇಫ್ಟಿ ಶೂಗಳಂತೆ "ನಾಲು" ಹಾಕಿಸುವರು. ಇದು ಮೂಕ ಪ್ರಾಣಿಗಳಿಗೆ ರೈತರು ನೀಡುವ ಕಾಳಜಿ. ಊರಿನ ತೇರು, ಸಂಕ್ರಾಂತಿ, ಕಾರಹುಣ್ಣಿಮೆ, ಬಸವ ಜಯಂತಿಗಳಲ್ಲಿ ಬಂಡಿ-ಎತ್ತುಗಳನ್ನು ಅಲಂಕರಿಸಿ, ಊರ ತುಂಬಾ ಮೆರೆಸುವರು. ಜಾನಪದರ ಹಬ್ಬಗಳೇ ಆದ ಇವು, ಕೃಷಿಕರ ಆಯಾಸ ಮರೆಸಿ ನವ ಚೈತನ್ಯ ಒದಗಿಸುತ್ತವೆ.

ಅದರಂತೆ ಹಲವರ ಬದುಕಿಗೆ, ಎತ್ತಿನ ಬಂಡಿ ಆಧಾರವಾಗಿತ್ತು ಎಂಬುದನ್ನು ಅಲ್ಲಗಳೆಯಲಾಗದು. ಕಾರಣ, ಮೊದಲು ಎತ್ತಿನ ಬಂಡಿ ಸಂಪೂರ್ಣವಾಗಿ ಮರದಿಂದಲೇ ಮಾಡುತ್ತಿದ್ದರು. ಅದನ್ನು ಪ್ರಮಾಣ ಬದ್ಧವಾಗಿ ಬಡಗಿತನದವರು ತಯಾರಿಸಬೇಕಿತ್ತು. ಜೊತೆಗೆ ಕಬ್ಬಿಣದ ಕೀಲು,ಎರಡೂ ಗಾಲಿಗಳನ್ನು ಜೋಡಿಸುವ 'ಬಂಡಿಅಚ್ಚು', ಚಕ್ರಕ್ಕೆ ಹಾಕುತ್ತಿದ್ದ ಕಬ್ಬಿಣ 'ಬಂಡಿಹಳಿ' ಕಮ್ಮಾರಿಕೆಯಿಂದ ತಯಾರಾಗುತ್ತಿತ್ತು. ಒಟ್ಟಾರೆ ದೃಷ್ಟಿಯಿಂದ ನೋಡಿದರೆ, ಹಳ್ಳಿಯ ಕೃಷಿ ಬದುಕಿನೊಂದಿಗೆ, ಉಳಿದ ಕುಲ ಕಸುಬುಗಳು ಜೊತೆ ಜೊತೆಯಾಗಿ ಸಾಗುತ್ತಿತ್ತು. ಈಗ ಬಿಡಿ, ಎತ್ತಿನ ಬಂಡಿಗಳನ್ನು ಕಾಣಲೇ ಸಾಧ್ಯವಿಲ್ಲ. ಬಂಡಿ ಎತ್ತರ ಕಡಿಮೆಯಾಗಿ, ಆಕಾರ ಬದಲಾಗಿ, ಬಂಡಿ ಗಾಲಿಗಳು ಬಸ್ ಗಾಲಿಗಳಂತೆ ಚಿಕ್ಕದಾಗಿ, ಅಂತಹುದೇ ಗಾಳಿ ತುಂಬಿಸುವ ಚಕ್ರ ಬಂದು, ಟೈರ್ ಬಂಡಿ ಎನಿಸಿವೆ. ರೈತರ ಜೇಬಿಗೂ ಭಾರ, ತನ್ನೊಡೆಯನಿಗೆ ಹೆಗಲಾದ ಎತ್ತಿಗಳಿಗೂ ಭಾರ ಎಂಬಂತಾಗಿದೆ. ಮೂಲ ಎತ್ತಿನ ಚಕ್ರಗಳು ಗಾಲಿ ಕಳಚಿ ಮೂಲೆಯಲ್ಲಿ ಓರೆಯಾಗಿ ನಿಂತಿವೆ. ಬಂಡಿಗಳ ಗಾಲಿಗಳು, ಹೆರಿಟೇಜ್ ಸಿಟಿಗಳಲ್ಲಿ, ರೆಸಾರ್ಟ್ ಗಳಲ್ಲಿ, ವಸ್ತು ಸಂಗ್ರಹಾಲಯಗಳಲ್ಲಿ ಅಲಂಕಾರಿಕ ವಸ್ತುಗಳಾಗಿವೆ. ಕಲಾತ್ಮಕ ಮನೆ-ಕಟ್ಟಡಗಳ ಗೇಟ್ ಗಳಾಗಿವೆ, ಆ?ಯಂಟಿಕ್ ಪೀಸ್ ಗಳಾಗಿ ಹೊಸ ರೂಪ ಪಡೆದಿವೆ.



## ಕವಿ ಮನಸು

### ಏಕ ದಂತ



ದೇವ ಗಣಪತಿ ನೀಡು ಸನ್ಮತಿ
ಚರಣಕೆರಗುವೆ ಅನುದಿನ
ಗಿರಿಜೆ ತನಯಗೆ ಮಂಗಳಾರತಿ
ಬೆಳಗಿ ಪೂಜಿಪೆ ದೇವನ

ಸುಮುಖ ಗಣಪನ ಉದರ ನೋಡುತ
ನಕ್ಕ ಅಣಕಿಸಿ ಚಂದ್ರನು
ಅವನ ಕುಹಕದ ಚೇಷ್ಟೆ ಸಹಿಸದೆ
ರೋಷಗೊಂಡನು ಗಣಪನು

ದಂತ ಒಂದನು ಎಸೆದ ಚಂದ್ರಗೆ
ಸಹಿಸಲಾಗದ ರೋಷಕೆ
ಚೌತಿ ಚಂದ್ರನ ಮಾಡಿ ದರ್ಶನ
ಕೃಷ್ಣ ಸಿಲುಕಿದ ಕಷ್ಟಕೆ

ಇಲಿಯನೇರುತ ಬರುವ ದೇವನು
ಮೊದಲ ಪೂಜೆಗೆ ಅಧಿಪತಿ
ಏಕದಂತನು ವಿಘ್ನ ಕಳೆಯುವ
ಭಕ್ತಿಗೊಲಿಯುವ ಗಣಪತಿ॥

– ಪೆರ್ಮುಖ ಸುಬ್ರಹ್ಮಣ್ಯ ಭಟ್

### ಬದುಕು ಮತ್ತು ಶಿಕ್ಷಣ



ಶಿಕ್ಷಣ ಬದುಕಿನ ಪ್ರಗತಿಗೆ ಪೂರಕ
ಜ್ಞಾನವ ಪಡೆದರೆ ಅಭಿವೃದ್ಧಿಗೆ ಉದಕ;
ಇಲ್ಲಗಳ ದಹಿಸಿ ಎಲ್ಲವ ಪಡೆಯಬೇಕು
ನೋವಲೂ ಪಾಠಕಲಿತು ಜೀವನ ಸಾಗಬೇಕು

ಕನಸುಗಳು ಭವಿಷ್ಯದ ಹಾದಿಗೆ ಎರಕ
ಕಾಯಕ ಮಂತ್ರವೇ ಸಮೃದ್ಧಿಯ ಚರಕ;
ಕಷ್ಟಗಳ ತುಳಿದರೆ ನಾಳೆಯೂ ಆಕರ್ಷಕ
ಏರಿಳಿತದ ಜೀವನವು ಅನುಭಾವದ ಸೂಚಕ

ಅರಿತು ನಡೆದರೆ ಭವಿಷ್ಯವು ಬೆಳಕು
ಮಿತಿ ಮೀರಿದರೆ ಬದುಕಿಗೆ ಕೊಳಕು;
ಜೀವನವು ಅವಕಾಶಗಳ ಸಮೃದ್ಧ ಸರಕು
ಬಳಸಿಕೊಂಡು ಬಾಳಿದರೆ ಮಾದರಿ ಸ್ವರ್ಗಕೂ

– ಕಾಡಜ್ಜಿ ಮಂಜುನಾಥ

### ಸ್ವರ್ಗಸುಖ...

ಮಾತೆಯ ಮಮತೆಯವೃಕ್ಷದಲ್ಲಿ
ಗರಿಮೂಡಿದ ಕನಸಿನಂತೆ
ದೇವಲೋಕದ ಹಣ್ಣು
ತಿನ್ನಲಾಗದ,ಈ ಹಣ್ಣು.
ಅಮೃತದ ಸವಿ ರುಚಿಯು.

ಎಲ್ಲಿದ್ದನೋ ಇವನು
ಬಾಳ ನಂದನದಲ್ಲಿ
ತಂದು ಸಂತಸ ಚಲ್ಲಿ
ಮನೆಯ ಚಲುವನು ತುಂಬಿ
ಘಲ್ ಘಲ್ ಹೆಜ್ಜೆಯಲಿ
ನಲಿದಾಡುವನು ಒಲವಿನಲಿ

ಎದೆಯ ಸಿರಿಯನೆಲ್ಲಾ
ಸವಿ ಮುತ್ತಿನಲಿ ತುಂಬಿ
ಮೌನದಲಿ ಮೊಳೆಯುತ್ತ
ತನ್ನ ತಾನೇ ಮರೆವ ಭಕ್ತನಂತೆ
ಆನಂದದ ನಗು ಮೊಗವು

ತಾಯಿ ತೊಡೆಯಲೊರಗಿದಾಗ
ಬೆರಳ ಚೀಪಿ ನಲಿಯುವಾಗ
ಸೆರಗು ನರಿಗೆ ಎಳೆಯುವಾಗ
ಕಣ್ಮಿಂಚು ಹೊಳೆಯುವಾಗ
ತಾಯಿಗೆಷ್ಟು ಹರ್ಷ ಮೂಡಿದೆ
ಬಾನು ಚಂದ್ರ ಬೆಳಗುವೇ

ತಾಯಿಗದುವೆ ಮಧುರ ಪ್ರೇಮ
ತೊಡೆಯೊಳಿಟ್ಟು
ಹಾಲೂಡುವಾಗ
ಎದೆಗೆ ಅಪ್ಪಿ ಮುದ್ದಿಡುವಾಗ
ಹಸುಗೂಸು ಕಣ್ಗಳಲಿ ನಗುವು
ತುಂಬಿರುವಾಗ
ತಾಯಿಗದುವೆ ಸ್ವರ್ಗ ಸುಖ

– ಮುದೇನೂರು ಪಾರ್ವತಮ್ಮ
ಚಿಗಟೇರಿ

# ಬಾಲಾಪರಾಧ



ಬಾಲಾಪರಾಧ – ಒಂದು ವಯೋಮಿತಿಯೊಳಗಿನ ಬಾಲಕರು ಮಾಡುವ ಸಮಾಜವಿರೋಧಿ ಎನಿಸುವ ಅಥವಾ ಅಪರಾಧವೆಂದು ಪರಿಗಣಿಸಲಾಗುವ ದುಷ್ಕೃತ್ಯಗಳನ್ನು ಈ ಹೆಸರಿನಿಂದ ಕರೆಯಲಾಗುತ್ತದೆ. ಅಂದರೆ ಹದಿನಾಲ್ಕು, ಹದಿನಾರು ಅಥವಾ ಯೌವನೋದಯಕ್ಕೆ ಮುಂಚೆ ಮಾಡುವ ಹದಿವಯಸ್ಸಿನ ಅಪರಾಧಗಳು (ಜ್ಯೂವಿನೆಲ್ ಡಿಲಿಂಕ್ವೆನ್ಸಿ). ಬೀಡಿ ಸೇದುವುದು, ಶಾಲೆಗೆ ತಪ್ಪಿಸಿಕೊಳ್ಳುವುದು, ಬಿಡಾಡಿ ಅಲೆಯುವುದು, ಕಿಸೆಗಳ್ಳತನ ಮಾಡುವುದರಿಂದ ಹಿಡಿದು ಶೀಲಭಂಗ ಮತ್ತು ಕೊಲೆಗಳವರೆಗಿನ ಎಲ್ಲ ರೀತಿಯ ಅಪರಾಧಗಳು ಈ ವ್ಯಾಪ್ತಿಗೆ ಸೇರುತ್ತವೆ. ವಾಹನಗಳ ಕಳವು, ಮನೆಮುರಿಯುವುದು, ಟಿಕೀಟು ರಹಿತ ಪ್ರಯಾಣ, ಜೂಜು, ಹೊಡೆದಾಟ, ಮದ್ಯಪಾನ, ಮಾದಕದ್ರವ್ಯಗಳ ಸೇವನೆ ಇವು ಹೆಚ್ಚಿನ ಪ್ರಾಮಾಣದ ಬಾಲಾಪರಾಧಗಳು.

ಈ ದುಷ್ಕೃತ್ಯಗಳಿಗೆ ನಾನಾ ಕಾರಣಗಳುಂಟು. ಅನಾರೋಗ್ಯ, ಶಾರೀರಿಕ ವೈಕಲ್ಯಗಳು, ಗ್ರಂಥಿಗಳ ತೊಂದರೆ, ವಿವಿಧರೀತಿಯ ಮಾನಸಿಕ ನ್ಯೂನತೆ ಹಾಗೂ ರೋಗಗಳು, ಭಾವನಾತ್ಮಕ ಅಸ್ಥಿರತೆ, ಅನಿರ್ಬಂಧಿತ ಲೈಂಗಿಕ ಬಯಕೆ ಮೊದಲಾದ ಶಾರೀರಿಕ–ಮಾನಸಿಕ ಕಾರಣಗಳು, ಹೆತ್ತವರ ಅಲಕ್ಷ್ಯ, ಭಗ್ನಕುಟುಂಬದ ಹಾನಿಕಾರಕ ಪರಿಣಾಮಗಳು ಕುಟುಂಬದಲ್ಲಿಯ ಆಪರಾಧೀ ಮನೋಭಾವಗಳು, ಕೆಡುಕರ ತಂಡದ ಪ್ರಭಾವ, ದಾರಿದ್ರ್ಯ, ಜೂಜು, ಕೆಟ್ಟಸಹವಾಸ ಅತೃಪ್ತಿಕರ ವಿದ್ಯಾಭ್ಯಾಸ, ತೀವ್ರಸ್ಪರ್ಧೆ ಹಾಗೂ ವ್ಯಾಪಕವಾದ ಹತಾಶೆಯ ಭಾವನೆ, ಅಹಿತಕರ ಮನೋರಂಜನೆ ರೇಡಿಯೋ, ವೃತ್ತಪತ್ರಿಕೆ, ಪತ್ತೇದಾರಿ ಕಥೆಗಳಿಂದ ಬರುವ ಉದ್ರೇಕ ಮೊದಲಾದ ಕೌಟುಂಬಿಕ ಹಾಗೂ ಸಾಮಾಜಿಕ ಕಾರಣಗಳು ಇಲ್ಲಿ ಗಣನೆಗೆ ಬರುತ್ತವೆ.

ಬಾಲಾಪರಾಧಕ್ಕೆ ಎಲ್ಲೋ ಕಾನೂನಿನ ನಿರ್ಲಕ್ಷವೆ ಕಾರಣ ಇರಬಹುದೇ?.... ಹೀಗೊಂದು ಸಣ್ಣದಾದ ಅನುಮಾನ ಎಲ್ಲಾ ಕಡೆ ಹರಿದಾಡುತಿದೆ. ಇತ್ತೀಚಿನ ದಿನಗಳಲ್ಲಿ ಹೆಚ್ಚುತ್ತಿರುವ ಅನೈತಿಕ ಚಟುವಟಿಕೆಗಳ ಪಾಲುದಾರರಲ್ಲಿ ಪ್ರತಿಶತ 80 ಯುವಕ ಅಪರಾಧಿಗಳಾಗಿದ್ದಾರೆ.. ಇದು ಭಯಾನಕ ಸತ್ಯ.. " ದೇಶದ ಪ್ರಗತಿ ಯುವಕರಿಂ ದ ಮಾತ್ರ ಸಾಧ್ಯ" ಎನ್ನುವ ವಿವೇಕಾನಂದರ ಹೇಳಿಕೆ ನಿಜವಾಗುತ್ತಾ? ಮೊನ್ನೆ ತಾನೆ ವಿಜಯ ವಾಣಿ ಪತ್ರಿಕೆಯಲ್ಲಿ ಕಳವಳದ ವಿಷಯ ತಿಳಿಸಲಾಗಿದೆ... ಇತೀಚಿನ ದಿನಗಳಲ್ಲಿ ನಡೆಯುತ್ತಿರುವ ಅಪರಾಧಗಳ, ಅಪರಾಧಿಗಳು ಎಲ್ಲಿ ಎಲ್ಲಿ ತಯಾರಾಗುತ್ತಿದ್ದಾರೆ? ಇವರಿಗೆ ಹೇಗೆ ಧೈರ್ಯ ಬರುವಂತಾಗಿದೆ? ಎನ್ನುತ್ತಿರುವ ಸಂದರ್ಭದಲ್ಲಿ ಬಲವಾದ ವಿಷಯ ಗೊತ್ತಾಗಿದೆ, ಅದೇನೆಂದರೆ ರಿಮಾಂಡ ಹೊಮ್ ಗಳಲ್ಲಿ, ಶಿಕ್ಷೆಗೆ ಒಳಪಟ್ಟು, ಶಿಕ್ಷೆ ಅನುಭವಿಸುತ್ತಿರುವ ಬಾಲಾಪಾರಾಧಿಗಳು ಒಂದೇ ಮನಸ್ಥಿತಿಯವರು ಇರುವುದಿಲ್ಲ. ಕೆಲವು ಮಕ್ಕಳು ಕ್ರೂರಿ, ಇನ್ನೂ ಕೆಲವು ಮಾನಸಿಕ ಅಸ್ಥಿರತೆ ಯಿಂದ ಕೂಡಿದವರು, ಇನ್ನೂ ಕೆಲವು ಮಕ್ಕಳು ಯಾವುದೊ ಸಣ್ಣ ತಪ್ಪಿಗೆ ಶಿಕ್ಷೆಗೆ ಗುರಿಯಾದವರು ಇರುತ್ತಾರೆ.



ನಂದಿನಿ ಸನಬಾಲ್
ಶಿಕ್ಷಕಿ, ಗುಲ್ಬರ್ಗಾ

Hampi Times E-paper
SCAN AND READ

ಸಕಾಲಕ್ಕೆ ರಿಮೈಂಡ್ ಹೋಂ ಗಳ್ಳಲ್ಲಿ ಬೇಕಾದ ಕಾನೂನು ವ್ಯವಸ್ಥೆ ಒದಗಿಸಿ ಕಾನೂನಾತ್ಮಕ ತನಿಖೆ ಮಾಡದೆ ವಿಳಂಬ ಮಾಡುತ್ತಿದ್ದು,ಮಕ್ಕಳು ಸಮಯಕ್ಕೆ ಕಲಿಯಬೇಕಾದ ಶಿಕ್ಷಣದಿಂದ ವಂಚಿತರಾಗುತ್ತಿದ್ದಾರೆ. ತೀವ್ರ ಥರದ ಅಪರಾಧ ಮಾಡಿದ ಮಕ್ಕಳೊಂದಿಗೆ ಶಿಕ್ಷೆ ಅನುಭವಿಸುತ್ತಿರುವ ಇತರೆ ಮಕ್ಕಳು ಕೂಡ ತಮ್ಮ ಮಾನಸಿಕ ಸ್ಥಿತಿ ಕಳೆದುಕೊಂಡು, ಇವರುಗಳು ಕೂಡ ಅನೈತಿಕ ಚಟುವಟಿಕೆಗಳಲ್ಲಿ ತೊಡಗಿಸಿ ಕೊಂಡಿದ್ದು ಸಮಾಜಕ್ಕೆ ಕಂಠಕವಾ ಗುತ್ತಿದೆ.

ಬಾಲಾಪರಾಧಕ್ಕೆ ಎಲ್ಲೋ ಕಾನೂನಿನ ನಿರ್ಲಕ್ಷವೆ ಕಾರಣ ಇರಬಹುದೇ?.... ಹೀಗೊಂದು ಸಣ್ಣದಾದ ಅನುಮಾನ ಎಲ್ಲಾ ಕಡೆ ಹರಿದಾಡುತಿದೆ. ಇತ್ತೀಚಿನ ದಿನಗಳಲ್ಲಿ ಹೆಚ್ಚುತ್ತಿರುವ ಅನೈತಿಕ ಚಟುವಟಿಕೆಗಳ ಪಾಲುದಾರರಲ್ಲಿ ಪ್ರತಿಶತ 80 ಯುವಕ ಅಪರಾಧಿಗಳಾಗಿದ್ದಾರೆ.. ಇದು ಭಯಾನಕ ಸತ್ಯ.. " ದೇಶದ ಪ್ರಗತಿ ಯುವಕರಿಂ ದ ಮಾತ್ರ ಸಾಧ್ಯ" ಎನ್ನುವ ವಿವೇಕಾನಂದರ ಹೇಳಿಕೆ ನಿಜವಾಗುತ್ತಾ?

ಮೊನ್ನೆ ತಾನೆ ವಿಜಯ ವಾಣಿ ಪತ್ರಿಕೆಯಲ್ಲಿ ಕಳವಳದ ವಿಷಯ ತಿಳಿಸಲಾಗಿದೆ... ಇತೀಚಿನ ದಿನಗಳಲ್ಲಿ ನಡೆಯುತ್ತಿರುವ ಅಪರಾಧಗಳ, ಅಪರಾಧಿಗಳು ಎಲ್ಲಿ ಎಲ್ಲಿ ತಯಾರಾಗುತ್ತಿದ್ದಾರೆ? ಇವರಿಗೆ ಹೇಗೆ ಧೈರ್ಯ ಬರುವಂತಾಗಿದೆ? ಎನ್ನುತ್ತಿರುವ ಸಂದರ್ಭದಲ್ಲಿ ಬಲವಾದ ವಿಷಯ ಗೊತ್ತಾಗಿದೆ, ಅದೇನೆಂದರೆ ರಿಮಾಂಡ ಹೊಮ್ ಗಳಲ್ಲಿ, ಶಿಕ್ಷೆಗೆ ಒಳಪಟ್ಟು, ಶಿಕ್ಷೆ ಅನುಭವಿಸುತ್ತಿರುವ ಬಾಲಾಪಾರಾಧಿಗಳು ಒಂದೇ ಮನಸ್ಥಿತಿಯವರು ಇರುವುದಿಲ್ಲ. ಕೆಲವು ಮಕ್ಕಳು ಕ್ರೂರಿ, ಇನ್ನೂ ಕೆಲವು ಮಾನಸಿಕ ಅಸ್ಥಿರತೆಯಿಂದ ಕೂಡಿದವರು, ಇನ್ನೂ ಕೆಲವು ಮಕ್ಕಳು ಯಾವುದೊ ಸಣ್ಣ ತಪ್ಪಿಗೆ ಶಿಕ್ಷೆಗೆ ಗುರಿಯಾದವರು ಇರುತ್ತಾರೆ.

ಸಕಾಲಕ್ಕೆ ರಿಮೈಂಡ್ ಹೋಂ ಗಳ್ಳಲ್ಲಿ ಬೇಕಾದ ಕಾನೂನು ವ್ಯವಸ್ಥೆ ಒದಗಿಸಿ ಕಾನೂನಾತ್ಮಕ ತನಿಖೆ ಮಾಡದೆ ವಿಳಂಬ ಮಾಡುತ್ತಿದ್ದು,ಮಕ್ಕಳು ಸಮಯಕ್ಕೆ ಕಲಿಯಬೇಕಾದ ಶಿಕ್ಷಣದಿಂದ ವಂಚಿತರಾಗುತ್ತಿದ್ದಾರೆ. ತೀವ್ರ ಥರದ ಅಪರಾಧ ಮಾಡಿದ ಮಕ್ಕಳೊಂದಿಗೆ ಶಿಕ್ಷೆ ಅನುಭವಿಸುತ್ತಿರುವ ಇತರೆ ಮಕ್ಕಳು ಕೂಡ ತಮ್ಮ ಮಾನಸಿಕ ಸ್ಥಿತಿ ಕಳೆದುಕೊಂಡು, ಇವರುಗಳು ಕೂಡ ಅನೈತಿಕ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದ್ದು ಸಮಾಜಕ್ಕೆ ಕಂಠಕವಾ ಗುತ್ತಿದೆ.

ಬಾಲಾಪರಾಧಿಗಳಿಗೆ ಸಕಾಲಕ್ಕೆ ಶಿಕ್ಷೆ ನೀಡಿ, ಇವರಿಗೆ ಬೇಕಾದ ಅಗತ್ಯ ಕ್ರಮಗಳೊಂದಿಗೆ ಶಿಕ್ಷಣ ಕೂಡ ಒದಗಿಸಬೇಕು, ಹಾಗೂ ರೀಹಾಬಿಟೇಷನ್ ಸೆಂಟರ್ನ ಸೌಲಭ್ಯ ಒದಗಿಸಬೇಕು.ಇನ್ನೊಂದು ಆಘಾತಕಾರಿ ವಿಷಯ ಎಂದರೆ. ಜೈಲಿನಿಂದ ಬಿಡುಗಡೆ ಆಗಿ ಹೊರಗಡೆ ಬಂದ ಮಕ್ಕಳಿಗೆ ಜನರು ನೋಡೋ ದೃಷ್ಟಿಕೋನನೆ ಬೇರೆ... ಇವರನ್ನು ಕೆಟ್ಟದಾಗಿ ನೋಡುವುದು, ಅವಹೇಳನಕಾರಿಯಾಗಿ ಬೈಯುವುದು, ಇವರೊಂದಿಗೆ ಬೇರೆಯದೆ ಇವರನ್ನು ಅಪರಾಧಿಯೆಂದು ಭಾವಿಸುವುದು, ಸಮಾಜದಿಂದ ದೂರ ಇಡುವುದು, ಕುಟುಂಬದವರೂ ಕೂಡ ಸ್ವೀಕಾರ ಮಾಡದೆ ಇವರನ್ನು ಹೊರ ಹಾಕುವುದರಿಂದ, ಬದುಕು ಇಷ್ಟೇನಾ? ನನಗೆ ಬದುಕಲು, ಬದಲಾಗಲು ಅವಕಾಶ ಇಲ್ಲ, ಕುಟುಂಬ, ಗೆಳೆಯರ, ಸಮಾಜದ ಪ್ರೀತಿ ಸಿಗುವುದಿಲ್ಲ ಎಂದು ತಿಳಿದ ಇವರು, ಬದುಕು ರೂಪಿಸಿಕೊಳ್ಳುವ ಆಸೆ ಬಿಟ್ಟು ಮದ್ಯಪಾನ, ಧೂಮಾಪನ,ಗಾಜಾ, ಡ್ರಗ್ಸ್ ಗೆ ಬಲಿಯಾಗಿ ಅನೈತಿಕ ಕೃತ್ಯ ಕೊಲೆ, ಸುಲಿಗೆ,ಅತ್ಯಾಚಾರ ಮಾಡುತ್ತಿರುವುದು ಬೆಳಕಿಗೆ ಬಂದಿದೆ.

ಇದು ಮುಂದೆ ಮಕ್ಕಳಿಗೂ, ಯುವಜನತೆಗೂ, ದೇಶಕ್ಕೂ ಕಂಟಕ. ಇದೆಲ್ಲ ಹತೋಟಿಗೆ ಬರಬೇಕಾದರೆ ಮನೆಯಿಂದ, ತಂದೆ ತಾಯಿ, ಕುಟುಂಬದಿಂದ ಹಾಗೂ ಶಾಲಾ ಶಿಕ್ಷಣದಿಂದ ನೈತಿಕ ಪಾಠ ಸಿಗಲೇ ಬೇಕು. ಬಾಲಾಪರಾಧಿಗಳಿಗೆ ಸರಿಯಾದ ಸಮಯಕ್ಕೆ ಕಾನೂನು ಸುವ್ಯವಸ್ತೆ , ಹಾಗೂ ಶಿಕ್ಷಣ ನೀಡಬೇಕು. ತಿಳಿದೋ ತಿಳಿಯದೆಯೋ ಅಪರಾಧಿಯಾಗಿ ಶಿಕ್ಷೆ ಅನುಭವಿಸಿ ಹೊರಗಡೆ ಬಂದ ಮಕ್ಕಳಿಗೆ ಕುಟುಂಬ ಹಾಗೂ ಸಮಾಜ ನೋಡುವ ಧೃಷ್ಟಿಕೋನ ಬದಲಾಗಿ ಅವರಿಗೆ ತಮ್ಮ ಭವಿಷ್ಯ ಹಾಗೂ ಮುಂದಿನ ಜೀವನ ಸುಗಮವಾಗಿ ರೂಪಿಸಿಕೊಳ್ಳಲು ಅವಕಾಶ ಮಾಡಿಕೊಡಬೇಕು....

ಎಂತಹ ಕ್ರೂರಿಯಾದರೂ ಸರಿ, ಅವರನ್ನು ನೋಡುವ ಧೃಷ್ಟಿಕೋನ ವಿಶಾಲವಾಗಿದ್ದರೆ, ಅವರನ್ನು ಸಾದಾರಣ ಮನುಷ್ಯನ್ನನ್ನಾಗಿ ಪರಿವರ್ತಿಸಬಹುದು ಎನ್ನುವ ಬಲವಾದ ನಂಬಿಕೆ ನನಗೆ ಇದೆ..... ತಪ್ಪು ಸಹಜ, ತಿದ್ದಿ ನಡಿಯೋದು ಮನುಜ, ಕ್ಷಮಿಸುವವನು ದೇವರ ಸ್ವರೂಪಿ......

# ತಾಲಿಬಾನಿಗಳ ಹುಟ್ಟಡಗಿಸಿದ ದಿಟ್ಟೆ

– ದೀಪಶ್ರೀ ಎಸ್ ಕೂಡ್ಲಿಗಿ



ಅದು 2007ರ ಇಸವಿ ತಾಲಿಬಾನಿಗಳು ಹೆಣ್ಣು ಮಕ್ಕಳು ಶಾಲೆಗೆ ಹೋಗುವಂತಿಲ್ಲ ಎಂದು ಸ್ವೇಚ್ಛಾಚಾರದ ಘೋಷಣೆಯನ್ನು ಮಾಡಿದರು. ಎಲ್ಲಾ ಹುಡುಗಿಯರು ಒಪ್ಪಿಕೊಂಡ ಇಂತಹ ಅರ್ಥಹೀನ ಘೋಷಣೆಯನ್ನು ಅವಳೊಬ್ಬಳು ಮಾತ್ರ ಒಪ್ಪಲಿಲ್ಲ. ಆಕೆಯ ನಿಲುವೇ ಬೇರೆಯಾಗಿತ್ತು. ಅದುವೇ ಶೈಕ್ಷಣಿಕರಣ, ಮೇಲಾಗಿ ಹೆಣ್ಣಿನ ಶೈಕ್ಷಣಿಕರಣ.ಮಕ್ಕಳು, ಮಹಿಳೆಯರ ಹಕ್ಕಿಗಾಗಿ ಹೋರಾಟ.

ಹೀಗೆ ತಾಲಿಬಾನಿಗಳ ವಿರುದ್ಧ ಮಹಿಳಾ ಶಿಕ್ಷಣದಾಸ್ತ್ರ ಹೂಡಿದ ಹುಡುಗಿ ಮಲಾಲಾ ಯೂಸಫ್ ಜಾಯ್.ಜುಲೈ 12 1997 ರಂದು ಮಿಂಗೋರಾ ವಾಯುವ್ಯ ಗಡಿ ಪ್ರಾಂತ್ಯ ಪಾಕಿಸ್ತಾನದಲ್ಲಿ ಜನಿಸಿದಳು.ತಂದೆ ಜಿಯಾವುದ್ದೀನ್ ಯೂಸಫ್ ಜಾಯ್ ,ತಾಯಿ ತೂರ್ ಪೆಕೈ ಯೂಸುಫ್ ಜಾಯ್. ಅಫ್ಘಾನ್ ಜಾನಪದ ನಾಯಕಿ ಹೆಸರಿನಿಂದ ಈಕೆಯ ಹೆಸರನ್ನು ಎರವಲು ಪಡೆಯಲಾಗಿದೆ. ಶಿಕ್ಷಣ ಬಿ ಎ. ಉದ್ಯೋಗ ಸ್ತ್ರೀ ಶಿಕ್ಷಣ ಕಾರ್ಯಕರ್ತೆ.ಮಲಾಲಾ ಹೆಸರಿನಲ್ಲಿ ಮಲಾಲಾ ನಿಧಿ ಸ್ಥಾಪಿಸಲಾಗಿದೆ.

2009ರಲ್ಲಿ ಬ್ಲಾಗ್ ಆರಂಭಿಸಿದ ಮಲಾಲಾ ತಾಲಿಬಾನಿಗಳ ದೌರ್ಜನ್ಯ, ಶೋಷಣೆಯ ಕುರಿತು ಪ್ರತಿಭಟಿಸುತ್ತಾ ಶಿಕ್ಷಣ ಪಡೆಯುವ ಆಸೆಯನ್ನು ವ್ಯಕ್ತಪಡಿಸಿದ್ದಾಳೆ. ಮೂರು ವರ್ಷ ತಂದೆಯೊಡನೆ ಶಿಕ್ಷಣದ ಹಕ್ಕಿಗಾಗಿ ಹೋರಾಡಿದಳು. ಪರಿಣಾಮ ಅಕ್ಟೋಬರ್ 9 2012ರಂದು ಬೆಳಗ್ಗೆ ತಾಲಿಬಾನಿ ಉಗ್ರರು ಮಲಾಲಾ ತಲೆಗೆ ಗುಂಡು ಹಾರಿಸಿದರು. ಆಗ ಆಕೆಗಿನ್ನು ಕೇವಲ ಹದಿನೈದರ ಹರೆಯ. ಇಂತಹ ಕೆಚ್ಚೆದೆಯ ಗುಂಡಿಗೆ ಆಕೆಗೆ ಹೇಗೆ ತಾನೇ ಒಡೆದಿರಬಹುದು?

ನಾಲ್ಕು ದಿನಗಳ ಬದುಕು– ಮರಣದ ಮಧ್ಯೇ ಹೋರಾಡಿ ಬರ್ಮಿಂಗ್ಹ್ಯಾಮ್ ಶಾಲೆಗೆ ಹಾಜರಾದಳು. ಧೈರ್ಯದ ಪೋರಿ, ಛಲದ ಕುವರಿ. ಹದಿನಾರನೇ ವಯಸ್ಸಿಗೆ ವಿಶ್ವಸಂಸ್ಥೆಯಲ್ಲಿ ಗಣ್ಯರೆದುರು ವಾಕ್ಚಾತುರ್ಯ ಪ್ರದರ್ಶಿಸಿದಳು. ಈಕೆಯ ಸಣ್ಣ ವಯಸ್ಸಿನ ಅಪ್ರತಿಮ ಸಾಹಸ ಕಂಡು ಟೈಮ್ಸ್ ಮ್ಯಾಗಜೀನ್ 2013 ರಲ್ಲಿ ವಿಶ್ವದ ಅತ್ಯಂತ ಪ್ರಭಾವಶಾಲಿ ವ್ಯಕ್ತಿಯ ಪಟ್ಟಿಯಲ್ಲಿ ಸ್ಥಾನವನ್ನು ನೀಡಿತು. ಈ ನಿಟ್ಟಿನಲ್ಲಿ ಸರ್ವಶ್ರೇಷ್ಠ ನೊಬೆಲ್ ಪ್ರಶಸ್ತಿ ಕೂಡ ಲಭಿಸಿತು.ಈಕೆ ಅತ್ಯಂತ ಕಿರಿಯ ವಯಸ್ಸಿನ ನೊಬೆಲ್ ಪ್ರಶಸ್ತಿ ವಿಜೇತೆ ಎನಿಸಿಕೊಂಡಳು. ಸಾಲು ಸಾಲು ಪ್ರಶಸ್ತಿಗಳು ಮಲಾಲಾ ಮುಡಿಗೇರಿದವು. ಸಾಧಿಸುವ ಹಂಬಲ ಇನ್ನು ನಿಂತಿಲ್ಲ. ಬದುಕು, ಜೀವ ಇರುವವರೆಗೂ ಸಾಧನೆಯ ದಾರಿ ಕ್ರಮಿಸುತ್ತದೆ ಅಲ್ಲವೇ?



ಈಕೆಯ ಸಾಹಸದ ಸವಿನೆನಪಿಗಾಗಿ ಪ್ರತಿ ವರ್ಷ ಜುಲೈ 12 ರಂದು "ಮಾಲಾಲಾ ದಿನ "ಆಚರಣೆ ಮಾಡಲಾಗುತ್ತದೆ. 2013 ಇದೇ ದಿನದಂದು ಯುಎನ್ ನಲ್ಲಿ ಶಿಕ್ಷಣದ ಪ್ರವೇಶಾತಿ ಕುರಿತು ಕರೆ ನೀಡಲಾಗಿದೆ. ವಿಶ್ವಸಂಸ್ಥೆಯ ಭಾಷಣದಲ್ಲಿ ಮಾತನಾಡಿದ ಸಾಹಸಿ "ಮಲಾಲಾ ದಿನ ನನ್ನ ದಿನವಲ್ಲ ಈ ದಿನ ಪ್ರತಿಯೊಬ್ಬ ಮಹಿಳೆ ಪ್ರತಿ ಹುಡುಗ ಹಾಗೂ ಹೆಣ್ಣಿನ ದಿನ, ಅವರ ಹಕ್ಕುಗಳಿಗಾಗಿ ಧ್ವನಿ ಎತ್ತುವ ದಿನ" ಎಂದಿದ್ದಾಳೆ.

ನಿಜಕ್ಕೂ ಈಕೆಯ ಜೀವನ ಆದರ್ಶಪ್ರಾಯ ಅಲ್ಲವಾ? ಸ್ವರಕ್ಷಣೆಗಾಗಿ ಹೊರಡುವ ಜಗತ್ತಿನಲ್ಲಿ ಸಮಾಜದ ಹಿತಕ್ಕಾಗಿ ಹೋರಾಡುವ,ತನ್ನ ಜೀವವನ್ನೇ ಒತ್ತೆ ಇಡುವ ಮಲಾಲಾ ಯೂಸಫ್ ಜಾಯ್ ಸದಾರ್ಶನೀಯ. ಈದೆಸೆಯಲ್ಲಿ ನಾವು ಯೋಚಿಸಬೇಕಿದೆ.

# ಬರ ಪರಿಸ್ಥಿತಿಯಲ್ಲಿ ಬೆಳೆ ನಿರ್ವಹಣೆ ರೈತರಿಗೆ ತರಬೇತಿ

■ ಹಂಪಿ ಟೈಮ್ಸ್ ಕೊಪ್ಪಳ

ತಾತ್ಕಾಲಿಕ ಬರ ಪರಿಸ್ಥಿತಿಯಲ್ಲಿ ಮಳೆಯಾಶ್ರಿತ ವಿವಿಧ ಬೆಳೆಗಳಾದ ಮೆಕ್ಕೆ ಜೋಳ, ಹೆಸರು, ಸಜ್ಜೆ, ಅಲಸಂದಿ ಅಲ್ಲದೇ ನವಣೆಯಂತಹ ಸಿರಿಧಾನ್ಯಗಳ ನಿರ್ವಹಣೆ ಕುರಿತು ಕೊಪ್ಪಳ ತಾಲ್ಲೂಕಿನ ಕಲಕೇರಿ ಗ್ರಾಮದಲ್ಲಿ ಜುಲೈ 10 ರಂದು ಕೃಷಿ ವಿಸ್ತರಣಾ ಶಿಕ್ಷಣ ಕೇಂದ್ರ, ಕೊಪ್ಪಳ ಹಾಗೂ ಕೋರಮಂಡಲ ಇಂಟರನ್ಯಾಶನಲ್ ಲಿಮಿಟೆಡ್ ಕಂಪನಿ ಸಹಯೋಗದಲ್ಲಿ ರೈತರಿಗೆ ಒಂದು ದಿನದ ತರಬೇತಿ ಹಾಗೂ ರೈತರೊಡನೆ ಸಂವಾದ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು.

ಜಿಲ್ಲೆಯಲ್ಲಿ ಆರಂಭದಲ್ಲಿ ಅತ್ಯಂತ ಆಶಾದಾಯಿಕವಾಗಿದ್ದ ಮುಂಗಾರುಮಳೆ ಈಗ ಕ್ಷೀಣವಾಗಿದ್ದು ಜಮೀನಿನಲ್ಲಿ ರೈತರು ಬಿತ್ತಿದ ವಿವಿಧ ಬೆಳೆಗಳು ತೀವ್ರ ಅಜೈವಿಕ ಒತ್ತಡಕ್ಕೆ ಒಳಗಾಗಿದ್ದು, ರೈತರು ಆತಂಕದಲ್ಲಿರುವ ಕಾರಣ ಕೊಪ್ಪಳ ಕೃಷಿ ವಿಸ್ತರಣಾ ಶಿಕ್ಷಣ ಕೇಂದ್ರದಿಂದ ರೈತರಿಗೆ ಬೆಳೆ ನಿರ್ವಹಣೆ ಕುರಿತು ಸಲಹೆಗಳನ್ನು ನೀಡಲಾಯಿತು.

ಕೃಷಿ ವಿಸ್ತರಣಾ ಶಿಕ್ಷಣ ಕೇಂದ್ರದ ಸಹ ಪ್ರಾಧ್ಯಾಪಕರಾದ ವಾಮನಮೂರ್ತಿ ಅವರು ಮಾತನಾಡಿ, ಬೆಳೆಗಳಿಗೆ ಕೀಟ ರೋಗಗಳ ಬಾಧೆ ಸಾಮಾನ್ಯ. ಆದರೆ ವಾತಾವರಣದಲ್ಲಿನ ಬದಲಾವಣೆಯಿಂದಾಗಿ ಬೆಳೆಗಳು ಮನುಷ್ಯರಂತೆ ಒತ್ತಡಕ್ಕೊಳಗಾಗುತ್ತವೆ. ಅತೀವೃಷ್ಠಿ ಅನಾವೃಷ್ಠಿ, ದೀರ್ಘಕಾಲದ ಬರ, ತಾತ್ಕಾಲಿಕ ಬರ ಅಲ್ಲದೇ ತೀವ್ರವಾದ ಚಳಿ, ಶುಷ್ಕಗಾಳಿ ಇತ್ಯಾದಿ ಬೆಳೆಗಳ ಮೇಲೆ ದುಷ್ಪರಿಣಾಮ ಬೀರುತ್ತವೆ. ನಾನು ನೋಡಿದಂತೆ ಬೇಗ ಮುಂಗಾರು ಮಳೆ ಆದಾಗ ರೈತರು ಬಿತ್ತನೆ ಮಾಡುತ್ತಾರೆ. ಅದರಲ್ಲೂ ಹೆಸರು ಈ ಭಾಗದ ನಗದು ಬೆಳೆ (ಕ್ಯಾಶಕ್ರಾಪ್) ಆಗಿದ್ದು, ಈ ಬಾರಿ ಸುಮಾರು 20 ಸಾವಿರ ಹೆಕ್ಟೇರ್‌ನಷ್ಟು ಡಿಎಪಿ ಜೊತೆಗೆ ಕೆಲವು ಸಸ್ಯಚೋದಕ ಬಳಸುವ ಮೂಲಕ ಮತ್ತು ಜೈವಿಕ ಗೊಬ್ಬರಗಳನ್ನು ಸಿಂಪರಣೆ ಮಾಡುವುದರ ಮೂಲಕ 8–10 ದಿನ ಒತ್ತಡ ಸಹಿಷ್ಣುತೆ ಪರಿಸ್ಥಿತಿಯನ್ನು ಬೆಳೆಗಳಿಗೆ ಒದಗಿಸಲು ಸಾಧ್ಯ. ಪ್ರತಿಯೊಬ್ಬ ರೈತರು ಕೃಷಿ ಹೊಂಡದಂತಹ ನೀರು ಸಂಗ್ರಹಣಾ ತೊಟ್ಟಿಗಳನ್ನು ನಿರ್ಮಿಸಿಕೊಂಡು ನೀರಿನ ಲಭ್ಯತೆ ಇರುವಂತೆ ನಿಗಾ ವಹಿಸಬೇಕು. ಬೆಳೆಗಳಿಗೆ ಅವಶ್ಯಕತೆಗಿಂತ ಹೆಚ್ಚಿನ ನೀರು ಕೊಡದೇ ನೀರಿನ ಬಜೆಟ್ ಅನುಸರಿಸಬೇಕು ಎಂದು ತಿಳಿಸಿದರು.




ಬೆಳೆಗಳಿಗೆ ಶಿಫಾರಸು ಮಾಡಿದ ಪ್ರಮಾಣದಲ್ಲೇ ಗೊಬ್ಬರಗಳನ್ನು ಬಳಸಬೇಕಲ್ಲದೇ ಪೋಟ್ಯಾಶ್‌ಯುಕ್ತ ಸಂಯುಕ್ತ ಗೊಬ್ಬರಗಳನ್ನು ಬಳಸುವುದರಿಂದ ಪೋಟ್ಯಾಶ್ ಬೆಳೆಗಳಿಗೆ ಲಭ್ಯವಾಗಿ ಬರ ನಿರೋಧಕ ಶಕ್ತಿ ಬರುತ್ತದೆ. ಗೊಬ್ಬರಗಳನ್ನು ಶಿಫಾರಸಿನಂತೆ ವಿವಿಧ ಹಂತಗಳಲ್ಲಿ 2–3 ಬಾರಿ ಹಂತ, ಹಂತವಾಗಿ ಕೊಡಬೇಕು.ಇದೇ ಸಂದರ್ಭದಲ್ಲಿ ರೈತರು ಮುಂಗಾರು ಬೆಳೆ ಸಮೀಕ್ಷೆ ತಾವೇ ಮಾಡಿಕೊಳ್ಳಬೇಕು ಮತ್ತು ತಪ್ಪದೇ ಬೆಳೆ ವಿಮೆ ಮಾಡಿಸಬೇಕು, ಇದರ ಬಗ್ಗೆ ಕೃಷಿ ಅಧಿಕಾರಿಗಳಿಂದ ಸಮಗ್ರ ಮಾಹಿತಿ ಪಡೆದುಕೊಳ್ಳಬೇಕೆಂದು ಕರೆ ನೀಡಿದರು.

ಕೋರಮಂಡಲ ಕಂಪನಿಯ ಕ್ಷೇತ್ರ ಅಧಿಕಾರಿ ಶ್ರೀನಿವಾಸ ಅವರು ಮಾತನಾಡಿ, ತಮ್ಮ ಕಂಪನಿಯ ಉತ್ಪನ್ನಗಳಾದ ನ್ಯಾನೋ, ಡಿ.ಎ.ಪಿ., ಗ್ರೀನಸ್ಟಾರ್ ಎನ್ನುವ ಸಸ್ಯಚೋದಕ ಅಲ್ಲದೇ ಪ್ಯಾರಂಫಾಸ್ ನಂತಹ ವಿಶಿಷ್ಟ ಉತ್ಪನ್ನಗಳ ಮಾಹಿತಿ ಹಾಗೂ ಬೆಳೆಗಳಲ್ಲಿ ಬಳಸುವ ನ್ಯಾನೋ ಡಿ.ಎ.ಪಿ ಕುರಿತು ಮಾಹಿತಿ ನೀಡಿದರು.

ಕಾರ್ಯಕ್ರಮದಲ್ಲಿ ಕಲಕೇರಿ ಗ್ರಾಮದ 40 ಕ್ಕೂ ಹೆಚ್ಚಿನ ರೈತರು ಈ ಕಾರ್ಯಕ್ರಮದಲ್ಲಿ ಭಾಗವಹಿಸಿ ಉಪಯುಕ್ತ ಮಾಹಿತಿ ಪಡೆದರು. ಹೆಚ್ಚಿನ ಮಾಹಿತಿಗಾಗಿ ಕೃಷಿ ವಿಸ್ತರಣಾ ಶಿಕ್ಷಣ ಕೇಂದ್ರಕ್ಕೆ ಭೇಟಿ ನೀಡಬಹುದು ಅಥವಾ ಡಾ. ಎಂ.ವಿ.ರವಿ(ಮೊ.ನಂ.9480247745) ಸಂಪರ್ಕಿಸಿ.

## ಮೈಕ್ರೋ ನ್ಯೂಸ್

### ನಳ ಸಂಪರ್ಕಕ್ಕಾಗಿ ಅರ್ಜಿ ಆಹ್ವಾನ

**ಹಂಪಿ ಟೈಮ್ಸ್ ಬಳ್ಳಾರಿ**
ಕುಡತಿನಿ ಪಟ್ಟಣದ ಪರಿಶಿಷ್ಟ ಪಂಗಡ ಹಾಗೂ ಇತರೆ ಹಿಂದುಳಿದ ಜನಾಂಗದವರಿಗೆ ನಳ ಸಂಪರ್ಕ ಶುಲ್ಕ ವೆಚ್ಚ ಭರಿಸಲು ಉದ್ದೇಶಿಸಲಾಗಿದ್ದು, ಅರ್ಹರಿಂದ ಅರ್ಜಿ ಆಹ್ವಾನಿಸಲಾಗಿದೆ ಎಂದು ಕುಡತಿನಿ ಪಟ್ಟಣ ಪಂಚಾಯಿತಿಯ ಮುಖ್ಯಾಧಿಕಾರಿ ತಿಳಿಸಿದ್ದಾರೆ.

ಪಟ್ಟಣದ 14 ಮತ್ತು 15 ನೇ ವಾರ್ಡ್‌ಗಳ ಅರ್ಹ ನಿವಾಸಿಗಳು ಅರ್ಜಿ ಸಲ್ಲಿಸಬಹುದಾಗಿದ್ದು, ಆಸಕ್ತರು ಅರ್ಜಿಯೊಂದಿಗೆ ಆಧಾರ್‌ಕಾರ್ಡ್, ಬ್ಯಾಂಕ್ ಖಾತೆ ಪುಸ್ತಕ, ಪಡಿತರ ಚೀಟಿ, ಭಾವಚಿತ್ರ ಹಾಗೂ ಇತರೆ ದಾಖಲೆಗಳೊಂದಿಗೆ ಜು.18 ರೊಳಗಾಗಿ ಅರ್ಜಿ ಸಲ್ಲಿಸಬೇಕು.

ಹೆಚ್ಚಿನ ಮಾಹಿತಿಗಾಗಿ ಕುಡತಿನಿ ಪಟ್ಟಣ ಪಂಚಾಯಿತಿ ಕಚೇರಿಗೆ ಸಂಪರ್ಕಿಸಬಹುದು ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ಜು.12ಕ್ಕೆ ಮಕ್ಕಳ ರಕ್ಷಣಾ ವ್ಯವಸ್ಥೆಯ ಕುರಿತು ಪ್ರಗತಿ ಪರಿಶೀಲನಾ ಸಭೆ

**ಹಂಪಿ ಟೈಮ್ಸ್ ಕೊಪ್ಪಳ**
ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದಿಂದ ಜಿಲ್ಲೆಯ ಮಕ್ಕಳ ರಕ್ಷಣಾ ವ್ಯವಸ್ಥೆಯ ಕುರಿತು ಭಾಗೀದಾರರೊಂದಿಗೆ ಜುಲೈ 12 ರಂದು ಜಿಲ್ಲಾ ಪಂಚಾಯತಿಯ ಜೆ.ಎಚ್.ಪಟೇಲ್ ಸಭಾಂಗಣದಲ್ಲಿ ಬೆಳಿಗ್ಗೆ 10 ಗಂಟೆಯಿಂದ ಮಧ್ಯಾಹ್ನ 01.30 ಗಂಟೆಯವರೆಗೆ ಸಮಾಲೋಚನಾ ಸಭೆ ಹಾಗೂ ಪ್ರಗತಿ ಪರಿಶೀಲನಾ ಸಭೆಯನ್ನು ಆಯೋಜಿಸಲಾಗಿದೆ. ಸಭೆಯ ಅಧ್ಯಕ್ಷತೆಯನ್ನು ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯರಾದ ಶೇಖರಗೌಡ ಜಿ.ರಾಮತ್ನಾಳ್ ಅವರು ವಹಿಸಿಕೊಳ್ಳುವರು. ಆದ್ದರಿಂದ ಸಂಬಂಧಿಸಿದ ಇಲಾಖೆಗಳ ಅಧಿಕಾರಿಗಳು ಪ್ರಸ್ತುತ ಸಾಲಿನ ಮಾಹಿತಿ ಹಾಗೂ ಕಳೆದ ಸಭೆಯ ನಡಾವಳಿಗಳಿಗೆ ಅನುಪಾಲನಾ ವರದಿಯೊಂದಿಗೆ ಸಮಯಕ್ಕೆ ಸರಿಯಾಗಿ ಖುದ್ದಾಗಿ ಹಾಜರಾಗಬೇಕು ಎಂದು ಜಿಲ್ಲಾಧಿಕಾರಿ ನಲಿನ್ ಅತುಲ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ಜು.16 ರಂದು ಹಡಪದ ಅಪ್ಪಣ್ಣ ಜಯಂತಿಯ ಪೂರ್ವಭಾವಿ ಸಭೆ

**ಹಂಪಿ ಟೈಮ್ಸ್ ಬಳ್ಳಾರಿ**
ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇವರ ಸಂಯುಕ್ತಾಶ್ರಯದಲ್ಲಿ ಜು.21 ರಂದು ಹಡಪದ ಅಪ್ಪಣ್ಣ ಜಯಂತಿ ಆಚರಣೆ ಸಂಬಂಧ ಅಪರ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜು.16 ರಂದು ಮಧ್ಯಾಹ್ನ 12.30 ಗಂಟೆಗೆ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಪೂರ್ವಭಾವಿ ಸಭೆ ಏರ್ಪಡಿಸಲಾಗಿದೆ ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಬಿ.ನಾಗರಾಜ ಅವರು ತಿಳಿಸಿದ್ದಾರೆ.

# ಬಸ್ ನಿಲ್ದಾಣ, ಆಸ್ಪತ್ರೆಯಲ್ಲಿ ಸೌಲಭ್ಯಗಳ ಕೊರತೆ ಚಿಕಿತ್ಸೆಗೆ ಉಪಕರಣಗಳಿದ್ದರೂ ವೈದ್ಯರ ಬರ

## ವಿಜಯನಗರ ಜಿಲ್ಲೆಗೆ ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗದ ಅಧ್ಯಕ್ಷರು, ಸದಸ್ಯರ ಭೇಟಿ, ಪರಿಶೀಲನೆ, ಅಧಿಕಾರಿಗಳ ತರಾಟೆ

**ಹಂಪಿ ಟೈಮ್ಸ್ ಹೊಸಪೇಟೆ**
ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗದ ಅಧ್ಯಕ್ಷರಾದ ಡಾ.ಟಿ.ಶ್ಯಾಮ್ ಭಟ್ ಹಾಗೂ ಆಯೋಗದ ಸದಸ್ಯರಾದ ಎಸ್.ಕೆ.ವಂಟಿಗೋಡಿ ಅವರು ಪೂರ್ವ ನಿಗದಿಯಂತೆ ಪರಿವೀಕ್ಷಣೆ ಕಾರ್ಯಕ್ರಮದಡಿ ಜುಲೈ 11ರಂದು ಹೊಸಪೇಟೆ ನಗರ ಸಂಚಾರ ನಡೆಸಿದರು.

ಜಿಲ್ಲಾಡಳಿತ ಭವನದಲ್ಲಿರುವ ಆಡಿಟೋರಿಯಂ ಹಾಲನಲ್ಲಿ ಜುಲೈ 11ರಂದು ಬೆಳಗ್ಗೆ ಜಿಲ್ಲಾಮಟ್ಟದ ಅಧಿಕಾರಿಗಳೊಂದಿಗೆ ಸಭೆ, ದೂರುಗಳ ವಿಚಾರಣೆ ನಡೆಸಿದ ಬಳಿಕ, ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗದ ಕಾರ್ಯದರ್ಶಿ ಎ.ದಿನೇಶ್ ಸಂಪತ್‌ರಾಜ್ ಹಾಗೂ ಅಧ್ಯಕ್ಷರ ಆಪ್ತ ಕಾರ್ಯದರ್ಶಿ ಅರುಣ್ ಪೂಜಾರ ಅವರೊಂದಿಗೆ ಅಧ್ಯಕ್ಷರು ಮತ್ತು ಸದಸ್ಯರು ನಗರ ಪರಿವೀಕ್ಷಣೆ ಕೈಗೊಂಡರು.

ಮೊದಲಿಗೆ ಹೊಸಪೇಟೆ ತಾಲೂಕು ಉಪ ಕಾರಾಗೃಹಕ್ಕೆ ಭೇಟಿ ನೀಡಿದರು. ಕಾರಾಗೃಹದಲ್ಲಿದ್ದ ಕೈದಿಗಳೊಂದಿಗೆ ಮಾತನಾಡಿದರು. ವಕೀಲರೊಂದಿಗೆ ಕಾಲಕಾಲಕ್ಕೆ ವಿಚಾರಣೆಗೆ ಹಾಜರಾಗುತ್ತೀರಾ? ಯೋಗ ಧ್ಯಾನ ಮಾಡುತ್ತೀರಾ? ಎಂದು ಕೇಳಿ ಮಾಹಿತಿ ಪಡೆದರು. ಉಪ ಕಾರಾಗೃಹದಲ್ಲಿ 36 ಪುರುಷರು ಹಾಗೂ ನಾಲ್ವರು ಮಹಿಳೆಯರು ಸೇರಿ 40 ಜನ ಕೈದಿಗಳಿದ್ದಾರೆ. 12 ಸಿಸಿಟಿವಿ ಕ್ಯಾಮರಾಗಳನ್ನು ಅಳವಡಿಸಲಾಗಿದೆ ಎಂದು ಸಹಾಯಕ ಜೈಲರ್ ಎಸ್. ಹೆಚ್. ಕಾಳಿ ಅವರು ಮಾಹಿತಿ ನೀಡಿದರು.

ಬಳಿಕ ಕೇಂದ್ರ ಬಸ್ ನಿಲ್ದಾಣಕ್ಕೆ ಭೇಟಿ ನೀಡಿದರು. ಹುಲಿಗಿ, ಕೊಪ್ಪಳ ಬಸ್ ನಿಲುಗಡೆಯ ಹತ್ತಿರದಲ್ಲಿರುವ ಕುಡಿಯುವ ನೀರು ಪೂರೈಕೆಯ ಸ್ಥಳ ವೀಕ್ಷಿಸಿ, ಅಲ್ಲಿ ಪಾಚಿಗಟ್ಟಿರುವುದನ್ನು ಕಂಡು ಸರಿ ಮಾಡಲು ತಿಳಿಸಿದರು. ಬಸ್ ನಿಲ್ದಾಣದಲ್ಲಿನ ಸ್ವೀಟ್‌ಮಾರ್ಟ್ ಸೇರಿದಂತೆ ವಿವಿಧ ಅಂಗಡಿಗಳ ಮಾಲೀಕರೊಂದಿಗೆ ಮಾತನಾಡಿ ನಿಗದಿಪಡಿಸಿದ ಬೆಲೆಗೆ ವಸ್ತುಗಳನ್ನು ಮಾರಾಟ ಮಾಡಲು ತಿಳಿಸಿದರು. ತಿಂಡಿ ತಿನಿಸುಗಳನ್ನು, ನೀರಿನ ಬಾಟಲ್‌ಗಳನ್ನು ಹೆಚ್ಚಿಗೆ ಬೆಲೆಗೆ ಮಾರಾಟ ಮಾಡುವುದು, ಅವಧಿ ಮೀರಿದ ತಿಂಡಿ ತಿನಿಸುಗಳನ್ನು ಮಾರಾಟ ಮಾಡುವುದು ಕಂಡು ಬಂದಲ್ಲಿ ಪ್ರಕರಣ



ದಾಖಲಿಸಲಾಗುವುದು ಎಂದು ಎಚ್ಚರಿಕೆ ನೀಡಿದರು.

ಬಸ್ ನಿಲ್ದಾಣದ ನೆಲಮಹಡಿಯ ಕಚೇರಿಗೆ ತೆರಳಿ ಅಲ್ಲಿದ್ದ ಮುರುಕಲು ಟೇಬಲ್, ಖುರ್ಚಿಗಳನ್ನು ಕಂಡು ಅಸಮಾಧಾನ ವ್ಯಕ್ತಪಡಿಸಿದರು. ಸಾರ್ವಜನಿಕರ ಕಚೇರಿಯಲ್ಲಿ ಈ ರೀತಿ ಅವ್ಯವಸ್ಥೆ ಸರಿಯಲ್ಲ. ಅಗತ್ಯವಿದ್ದರು ಸಹ ಕಚೇರಿಗೆ ಹೊಸ ಸಾಮಗ್ರಿ ಏಕೆ ಖರೀದಿಸಿಲ್ಲ? ಪಾಸುಕೊಡಲು ನೇಮಿಸಿದ ಖಾಸಗಿ ಏಜೆನ್ಸಿಯವರಿಗೆ ಕೂಡಲು ಖುರ್ಚಿ ಮತ್ತು ಟೇಬಲ್ ಯಾಕೆ ನೀಡಿಲ್ಲ. ಪತ್ರಗಳನ್ನು ಕಚೇರಿಯಲ್ಲಿ ಎಲ್ಲೆಂದರಲ್ಲಿ ಏಕೆ ಇಟ್ಟಿದ್ದೀರಿ? ಎಂದು ಸಹಾಯಕ ಸಂಚಾರಿ ನಿರೀಕ್ಷಕರು ಮತ್ತು ಡಿಟಿಓ ಅವರಿಗೆ ತರಾಟೆಗೆ ತೆಗೆದುಕೊಂಡರು. ಈ ಅವ್ಯವಸ್ಥೆಯನ್ನು ಕೂಡಲೇ ಸರಿಪಡಿಸಿ ಆಯೋಗಕ್ಕೆ ವರದಿ ಸಲ್ಲಿಸಬೇಕು ಎಂದು ಕಟ್ಟುನಿಟ್ಟಿನ ನಿರ್ದೇಶನ ನೀಡಿದರು. ಕಾಲೇಜು ವಿದ್ಯಾರ್ಥಿಗಳು ಪಾಸು ಪಡೆಯಲು ಸಾಲಾಗಿ ನಿಂತಿರುವುದನ್ನು ನೋಡಿದರು. ವಿದ್ಯಾರ್ಥಿಗಳಿಗೆ ಅಧ್ಯಯನಕ್ಕೆ ತೊಂದರೆಯಾಗದ ಹಾಗೆ ವಿಳಂಬವಾಗದ ಹಾಗೆ ಕ್ಷಿಪ್ರಗತಿಯಲ್ಲಿ ಪಾಸುಗಳ ಪೂರೈಕೆಗೆ ವ್ಯವಸ್ಥೆ ಮಾಡಬೇಕು ಎಂದು ಸಾರಿಗೆ ಇಲಾಖೆಯ ಮೋತಿಲಾಲ್ ಲಮಾಣಿ ಮತ್ತು ಆರ್.ಪಿ.ವಾಜಂತ್ರಿ ಅವರಿಗೆ ನಿರ್ದೇಶನ ನೀಡಿದರು.



ಬಳಿಕ ತಂಡವು ತಾಯಿ ಮತ್ತು ಮಕ್ಕಳ ಆಸ್ಪತ್ರೆಗೆ ಭೇಟಿ ನೀಡಿತು. ಆಸ್ಪತ್ರೆಯಲ್ಲಿನ ವೈದ್ಯಕೀಯ ಸೌಕರ್ಯಗಳ ಬಗ್ಗೆ ಮಾಹಿತಿ ಪಡೆದುಕೊಂಡರು. ಆಸ್ಪತ್ರೆಯಲ್ಲಿ ಸದ್ಯ 12 ಜನ ತಜ್ಞ ವೈದ್ಯರಿದ್ದಾರೆ. ಒಂದು ರೆಡಿಯಾಲಜಿ ಹುದ್ದೆ ಖಾಲಿಯಿದೆ. 6 ಗ್ರೂಪ್ ಡಿ., 26 ನರ್ಸ್‌ಗಳು ಇದ್ದಾರೆ. ಹೆಚ್ಚುವರಿ 10 ಜನ ನರ್ಸಗಳು ಮತ್ತು ಕನಿಷ್ಟ 6 ಜನ ಗ್ರೂಪ್ ಡಿ ಸಿಬ್ಬಂದಿ ಬೇಕಿರುತ್ತಾರೆ ಎಂದು ಡಿಎಚ್‌ಓ ಡಾ.ಶಂಕರ ನಾಯಕ ಅವರು ತಿಳಿಸಿದರು.

ಈ ವೇಳೆ ಜಿಲ್ಲಾ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿಗಳಾದ ಸಲೀಮ್ ಪಾಶಾ, ನಗರಸಭೆ ಪೌರಾಯುಕ್ತರಾದ ಮನೋಹರ, ಸಮಾಜ ಕಲ್ಯಾಣ ಇಲಾಖೆಯ ಜಂಟಿ ನಿರ್ದೇಶಕರಾದ ಮಂಜುನಾಥ ಹೆಚ್.ಎಸ್.., ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಉಪ ನಿರ್ದೇಶಕರಾದ ರಾಮಚಂದ್ರಪ್ಪ ಕೆ.ಬಿ., ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯ ಅಧಿಕಾರಿ ಶಾಶುಮೋದ್ದಿನ್, ಇತರರು ಇದ್ದರು.

> ವಿಜಯನಗರ ಜಿಲ್ಲೆಗೆ ಸಂಬಂಧಿಸಿದಂತೆ ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗಕ್ಕೆ ಸಲ್ಲಿಕೆಯಾದ ಒಟ್ಟು 9 ದೂರುಗಳ ಮೇಲೆ ವಿಚಾರಣೆ ನಡೆಸಿ ಇತ್ಯರ್ಥಪಡಿಸಲಾಯಿತು.
>
> ಸಭೆಯಲ್ಲಿ ಸಾರ್ವಜನಿಕ ಅಹವಾಲು ಸ್ವೀಕಾರ ಕಾರ್ಯಕ್ರಮ ಸಹ ನಡೆಯಿತು. ಸಭೆಯಲ್ಲಿ ಹಾಜರಿದ್ದ ಕೆಲವು ಸಾರ್ವಜನಿಕರು ದೂರು ಸಲ್ಲಿಸಿದರು. ದೂರುಗಳ ಮೇಲೆ ವರದಿ ಸಲ್ಲಿಸಲು ಸಂಬಂಧಿಸಿದ ಇಲಾಖೆಗೆ ಸೂಚಿಸಲಾಗುವುದು. ಅವರಿಂದ ಸ್ವೀಕೃತವಾದ ವರದಿಯನ್ನು ದೂರುದಾರರಿಗೆ ಕಳುಹಿಸಿ ವಿಚಾರಣೆ ನಡೆಸಲಾಗುವುದು ಎಂದು ತಿಳಿಸಿದರು. ಸಾರ್ವಜನಿಕ ಅಹವಾಲುಗಳ ಬಗ್ಗೆ ಸೂಕ್ತ ರೀತಿಯಲ್ಲಿ ಪರಿಶೀಲಿಸಿ ಇತ್ಯರ್ಥಪಡಿಸಲು ಅಧಿಕಾರಿಗಳಿಗೆ ತಿಳಿಸಲಾಗುವುದು ಎಂದು ಅಧ್ಯಕ್ಷರು ತಿಳಿಸಿದರು.

# ನಾಳೆ ವಿವಿಧೆಡೆ ವಿದ್ಯುತ್ ವ್ಯತ್ಯಯ

**ಹಂಪಿ ಟೈಮ್ಸ್ ಹೊಸಪೇಟೆ**
ಸಂಕ್ಲಾಪುರ ವಿದ್ಯುತ್ ವಿತರಣಾ ಕೇಂದ್ರದಲ್ಲಿ ಜುಲೈ 13 ರಂದು ಬೆಳಿಗ್ಗೆ 9 ರಿಂದ ಸಂಜೆ 6 ಗಂಟೆಯವರೆಗೆ ಪ್ರೊವೈಡಿಂಗ್ ಸ್ಪೇರ್ 1*10 ಎಂವಿಎ ಪವರ್ ಟ್ರಾನ್ಸ್‌ಫಾರ್ಮರ್ ವರ್ಕ್ ಮತ್ತು ಇತರೆ ದುರಸ್ತಿ ಕಾರ್ಯ ಇರುವುದರಿಂದ ಈ ವಿದ್ಯುತ್ ವಿತರಣಾ ಕೇಂದ್ರದಿಂದ ಹೊರಡುವ ಎಲ್ಲಾ 11ಕೆವಿ ಫೀಡರ್‌ಗಳಾದ ಸಿಟಿ, ರಾಮ, ಜಂಬುನಾಥ ಗುಡಿ, ಕೆಓಎಫ್, ಎಂಪಿ ಪ್ರಕಾಶ, ವಿಜಯನಗರ, ಸಂಕ್ಲಾಪುರ, ಟಿಎಸ್‌ಪಿ, ಎನ್‌ಎಸ್ ಕಾಲೋನಿ, ರಾಜಪುರ (ಎನ್‌ಜೆ ವಾಯ್), ಬಸವನ ದುರ್ಗಾ (ಎನ್‌ಜೆವಾಯ್), ಬಿವಿ ಗೆರೆ(ಐಪಿ), ಕಲ್ಲಹಳ್ಳಿ(ಐಪಿ), ಎಫ್–17 ವಡ್ಡರಹಳ್ಳಿ ವ್ಯಾಪ್ತಿಗೆ ಒಳಪಡುವ ಸುತ್ತಲಿನ ಪ್ರದೇಶಗಳಾದ ಬಳ್ಳಾರಿ ರೋಡ, ಸಿರ್ಸಿನ್‌ಕಲ್ಲು, ನಿಯಾಜಿ ನಗರ, ಅಜಾದ್ ನಗರ ಈಶ್ವರ ನಗರ, ಉಕ್ಕಡಕೆರೆ, ಜೆ.ಪಿ.ನಗರ, ಅರವಿಂದ ನಗರ, ಬಸ್ ಡಿಪೊ ಏರಿಯಾ, ಸಾಯಿ ಕಾಲೋನಿ, ಹಂಚಿನಗುಡಿ, ಕೊಂಡನಾಯಕನ ಹಳ್ಳಿ, ಅನಂತಶಯನಗುಡಿ, ಸಂಕ್ಲಾಪುರ ಇಂಡಸ್ಟ್ರಿಯಲ್ ಏರಿಯಾ, ಕರ್ನಾಟಕ ಆಯಿಲ್ ಫ್ಯಾಕ್ಟರಿ ಏರಿಯಾ, ಕಾರಿಗನೂರ, ವಿನಾಯಕ ನಗರ, ಆಕಾಶವಾಣಿ, ಪಾರ್ವತಿನಗರ, ವಾಲ್ಮೀಕಿ ನಗರ, ಸೊಂಡರು ರೋಡ್, ರಾಮಾ ಟಾಕೀಸ್ ಏರಿಯಾ, ಚಲುವಾದಿ ಕೇರೆ, ಉಕ್ಕಡಕೆರೆ, ಚಿತ್ತರ ಕೆರೆ, ಮ್ಯಾಸ ಕೆರೆ, ಬಾಣದ ಕೆರೆ, ಜಂಬುನಾಥ ಹಳ್ಳಿ, ಕಾರಿಗನೂರು, ಮಾರುತಿ ಕಾಲೋನಿ, ಸಂಕ್ಲಾಪುರ, ಸಾಯಿಬಾಬಾ ಗುಡಿ ಏರಿಯಾ, ಡ್ಯಾಮ ರೋಡ್, ಟಿ ಬಿ ಡ್ಯಾಮ್, ಎನ್ ಸಿ ಕಾಲೋನಿ, ಗಾಂಧೀ ಕಾಲೋನಿ, ಗೋಕುಲ ನಗರ, ನಿಶಾನಿ ಕ್ಯಾಂಪ್, ಕಲ್ಲಹಳ್ಳಿ, ರಜಾಪುರ, ಜಿ.ಜಿ ಕ್ಯಾಂಪ್, ಕಣಿವೆ ರಾಯನಗುಡಿ, ವ್ಯಾಸನಕೇರೆ, ಕಾಕುಬಾಳು, ಗುಡ್ಲುವದ್ದಿಗೇರೆ, ಪಿ.ಕೆ ಹಳ್ಳಿ, ಸಂಕ್ಲಾಪುರ, ನಾಗೇನಹಳ್ಳಿ, ಬಸವನ ದುರ್ಗ, ಹೊಸುರು, ಇಪ್ಪಿತ್ತೇರಿ ಮಾಗಣಿ, ನರಸಾಪುರ, 118 ಡಣಾಪುರ, ಶುಭ್‌ಲಾಭ್ ಕೈಗಾರಿ ಕೆಗಳು, ವಡ್ಡರಹಳ್ಳಿ ವ್ಯಾಪ್ತಿಯಲ್ಲಿ ವಿದ್ಯುತ್ ಸರಬರಾಜಿನಲ್ಲಿ ಅಡಚಣೆ ಆಗಲಿದೆ. ಆದ್ದರಿಂದ ಎಲ್ಲಾ ರೈತ ಬಾಂಧವರು ಹಾಗೂ ಗ್ರಾಹಕರು ಸಹಕರಿಸಬೇಕು ಜೆಸ್ಕಾಂನ ಕಾರ್ಯ ಪಾಲನೆ ನಗರ ವಿಭಾಗದ ಕಾರ್ಯ ನಿರ್ವಾಹಕ ಇಂಜಿನೀಯರ್ ತಿಳಿಸಿದ್ದಾರೆ.

# ಕೆಡಿಪಿ ಪ್ರಗತಿ ಪರಿಶೀಲನಾ ಸಭೆ ಮುಂದೂಡಿಕೆ

**ಹಂಪಿ ಟೈಮ್ಸ್ ಬಳ್ಳಾರಿ**
ವಸತಿ, ವಕ್ಫ್ ಮತ್ತು ಅಲ್ಪ ಸಂಖ್ಯಾತರ ಕಲ್ಯಾಣ ಇಲಾಖೆ ಹಾಗೂ ಬಳ್ಳಾರಿ ಜಿಲ್ಲಾ ಉಸ್ತುವಾರಿ ಸಚಿವ ಬಿ.ಜೆಡ್.ಜಮೀರ್ ಅಹ್ಮದ್ ಖಾನ್ ಅವರ ಅಧ್ಯಕ್ಷತೆಯಲ್ಲಿ ಜು. 12 ರಂದು ನಡೆಸಲು ಉದ್ದೇಶಿಸಲಾಗಿದ್ದ ನಾಲ್ಕನೇಯ ತ್ರೈಮಾಸಿಕ ಪ್ರಗತಿ ಪರಿಶೀಲನಾ ಸಭೆಯನ್ನು ಕಾರಣಾಂತರಗಳಿಂದ ಮುಂದೂಡಲಾಗಿದೆ ಎಂದು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಹಾಗೂ ಕರ್ನಾಟಕ (20 ಅಂಶ) ಅನುಷ್ಠಾನ ಸಮಿತಿಯ ಸದಸ್ಯ ಕಾರ್ಯದರ್ಶಿಯೂ ಆದ ರಾಹುಲ್ ಶರಣಪ್ಪ ಸಂಕನೂರ ಅವರು ತಿಳಿಸಿದ್ದಾರೆ.




# ಉತ್ತಮ ಪತ್ರಕರ್ತರಾಗಲು ಭಾಷಾಜ್ಞಾನ ಅಗತ್ಯ

## ಕುಲಪತಿ ಪ್ರೊ. ತಿಪ್ಪೇರುದ್ರಪ್ಪ ಅಭಿಪ್ರಾಯ । ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯದಲ್ಲಿ ಪತ್ರಿಕಾ ದಿನಾಚರಣೆ

**ಹಂಪಿ ಟೈಮ್ಸ್ ಬಳ್ಳಾರಿ**
ವಿದ್ಯಾರ್ಥಿಗಳು ವೃತ್ತಿಪರ ಉತ್ತಮ ಪತ್ರಕರ್ತರಾಗಲು ಬರವಣಿಗೆ ಕೌಶಲ್ಯ ದೊಂದಿಗೆ ಭಾಷೆಯ ಜ್ಞಾನ ಹೊಂದುವುದು ಅಗತ್ಯವಾಗಿದೆ ಎಂದು ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯದ ಕುಲಪತಿಗಳಾದ ಪ್ರೊ. ತಿಪ್ಪೇರುದ್ರಪ್ಪ ಅವರು ಅಭಿಪ್ರಾಯಪಟ್ಟರು.

ಇಲ್ಲಿನ ವಿಜಯನಗರ ಶ್ರೀ ಕೃಷ್ಣ ದೇವರಾಯ ವಿಶ್ವವಿದ್ಯಾಲಯದ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ಅಧ್ಯಯನ ವಿಭಾಗ ಹಾಗೂ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಇವರ ಸಹಯೋಗ ದೊಂದಿಗೆ ವಿವಿಯ ಡಾ.ಬಿ.ಆರ್ ಅಂಬೇಡ್ಕರ್ ಸಭಾಂಗಣದಲ್ಲಿ ಗುರುವಾರದಂದು ಆಯೋಜಿಸಿದ್ದ ಪತ್ರಿಕಾ ದಿನಾಚರಣೆ –2024 ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಪತ್ರಿಕೋದ್ಯಮ ಕ್ಷೇತ್ರವು ನೈಜತೆಯನ್ನು ಕಾಪಾಡುವಲ್ಲಿಪ್ರಮುಖಪಾತ್ರವಹಿಸಲಿದ್ದು, ಸಂಬಂಧಕ್ಕೆ ಬೆಲೆ ಕೊಡುವ ಮಾಧ್ಯಮ



ನೀತಿಯನ್ನು ಬಿಂಬಿಸುವಂತಿರಬೇಕು ಎಂದರು.

ಸ್.ಎನ್ ಅವರು ಮಾತನಾಡಿ, ವಿದ್ಯಾರ್ಥಿಗಳು ಹೆಚ್ಚಾಗಿ ಪತ್ರಿಕೆಗಳೊಡನೆ ಸ್ನೇಹ ಸಂಬಂಧ ಹೊಂದಿ, ಪತ್ರಿಕೆಯಲ್ಲಿ ಪ್ರಕಟಗೊಳ್ಳುವ ವಿಚಾರಧಾರೆಗಳನ್ನು ಅರಿತು ಕೊಳ್ಳಬೇಕು ಎಂದು ಹೇಳಿದರು.

ಮಾಧ್ಯಮಗಳು ಸುದ್ದಿಯ ಆಯ್ಕೆಯಲ್ಲಿ ಸಾಮಾಜಿಕ ಕಳಕಳಿ ಹಾಗೂ ಹೊಣೆಗಾರಿಕೆ ಹೊಂದಿರಬೇಕು, ನಕಾರಾತ್ಮಕ ವಿಷಯ ಗಳಿಗಿಂತ, ಧನಾತ್ಮಕ ವರದಿಗಳಿಗೆ ಹೆಚ್ಚಿನ ಆದ್ಯತೆ ನೀಡಬೇಕು, ಸಾಧಕರ ಸಾಧನೆಗಳ ಬಗ್ಗೆ ಮಾಧ್ಯಮಗಳು ಬೆಳಕು ಚೆಲ್ಲುವ ಕೆಲಸ ಮಾಡಬೇಕು ಎಂದರು.

ವಿವಿಯ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗದ ಮುಖ್ಯಸ್ಥ ರಾಕೇಶ್ ವಿ.ತಾಳಿಕೋಟಿ ಅವರು ಪ್ರಾಸ್ತಾವಿಕವಾಗಿ ಮಾತನಾಡಿ, ಪತ್ರಿಕೋದ್ಯಮಕ್ಕು ಮತ್ತು ಬಳ್ಳಾರಿಗೂ ಅವಿನಾಭಾವ ಸಂಬಂಧವಿದ್ದು, ರಾಜ್ಯದ ಮೊಟ್ಟ ಮೊದಲ ಪತ್ರಿಕೆ ಮಂಗಳೂರು ಸಮಾಚಾರ ದಿನಪತ್ರಿಕೆಯು 1844 ರಲ್ಲಿ ಕಂನಡ ಸಮಾಚಾರ ಎಂದು ಮರುನಾಮಕರಣಗೊಂಡು ಇಲ್ಲಿಂದಲೇ ಮುದ್ರಣವಾಗಿದ್ದು ವಿಶೇಷ ಎಂದು ಸ್ಮರಿಸಿದರು.

ಈ ವೇಳೆ ಮುದ್ರಣ ಮಾಧ್ಯಮ, ಟಿವಿ ಮಾಧ್ಯಮ ಹಾಗೂ ಡಿಜಿಟಲ್ ಮಾಧ್ಯಮ ಕುರಿತಂತೆ ಪತ್ರಿಕೋದ್ಯಮ ಕ್ಷೇತ್ರದಲ್ಲಿನ ಅಂಶಗಳ ಕುರಿತು ವಿದ್ಯಾರ್ಥಿಗಳೊಂದಿಗೆ ಸಂವಾದ ಏರ್ಪಡಿಸಲಾಯಿತು.

ಈ ಸಂದರ್ಭದಲ್ಲಿ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗದ ಅತಿಥಿ ಉಪನ್ಯಾಸಕ ಜಯರಾಜ್.ಹೆಚ್, ತೆಕ್ಕಲಕೋಟೆಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಉಪನ್ಯಾಸಕ ರವೀಂದ್ರ ಕೆಳಗಡಿ, ಹೊಸಪೇಟೆಯ ಸರ್ಕಾರಿ ಪದವಿ ಕಾಲೇಜಿನ ಪತ್ರಿಕೋದ್ಯಮ ವಿಭಾಗದ ಅತಿಥಿ ಉಪನ್ಯಾಸಕ ಸುಂಕಣ್ಣ ಸೇರಿದಂತೆ ವಾರ್ತಾ ಮತ್ತು ಸಾರ್ವಜನಿಕ ಇಲಾಖೆಯ ಸಿಬ್ಬಂದಿ, ವಿವಿಧ ವಿಭಾಗದ ಉಪನ್ಯಾಸಕರು, ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA